ಜನಪದ

ಬೆಲೆ : ರೂ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೩ ಮಾರ್ಚ್ -೨೦೧೩ ಸಂಚಿಕೆ-೯



ಭಾರತಕ್ಕೆ ಖಾದಿ ಮತ್ತು ಗ್ರಾಮೋದ್ಯೋಗ ಅತ್ಯಗತ್ಯ !

ಜನಪದ ವಿಚಾರದಲ್ಲಿ

ಮಾರ್ಚ್ - ೨೦೧೩

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಮಾರ್ಚ್ - ೨೦೧೩
ಸಂಪುಟ - ೧೩
ಸಂಚಿಕೆ - ೬

ಸಂಪಾದಕ
ಸುರೇಂದ್ರ ಕೌಲಗಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

08236 316344
08236 299854
e-mail : janapada@yahoo.com
web: janapada.net

ದೇವನಹಳ್ಳಿ

ಬೆಳುಬೆಳಗಾಯಿತು, ಎಳಬೆಳಕಾಡಿತು
ದೇವನಹಳ್ಳಿಯ ನೆಲ ನಲಿದಿತ್ತು
ಆತ್ಮೋಲ್ಲಾಸದ ಮಧುರಾಲಾಪದ
ತೊಟ್ಟಿಲ ಮಗುವೊಲು ಜಗವುಲಿದಿತ್ತು.

ಆಗಸ ಮಾನಸಸರದೊಳು ಮಿಂದೊಲು
ತಣ್ಣನೆ ತೆಳುಗಾಳಿಯು ಬೀಸಿತ್ತು;
ಎದುರಿನ ಹೊಲದೊಳು -
ಹೊಂಗೆಯ ತುರುಗಲು
ಬೆಳಕಿನ ತುಂತುರುಗಳ ಹನಿಸಿತ್ತು.

ಆವುದೊ ಹಾಡಿಗೆ ಅಭಿನಯಿಸುವ ತೆರ
ಅರಳಿಯು ಎಲೆಗೈಯಾಡಿಸುತಿತ್ತು;
ಮುಗಿಲಿಳೆ ಕೂಡುವ ತಾಣದಿ ಬೆಟ್ಟವು
ಮುಗಿಲಿಗಿಂತಲೂ ಹಗುರಾಗಿತ್ತು.

ಏತಕು ಅಂಟದೆ ತನ್ನಾರಾಮದಿ
ಹದುಳದಿ ನೆಮ್ಮದಿಯೊಳು ಮನವಿತ್ತು.
ದೇವನಹಳ್ಳಿಯ ದಿನವಿಂತಿತ್ತು.
ದೇವರಿಗಾಡುಂಬೊಲದಂತಿತ್ತು.

- ಪು.ತಿ.ನ

ವಿಚಾರ ದೀಪ್ತಿ

ಅಗಾಧವಾದ ಪರಿಸರಕ್ಕೆ ಕೈಮುಗಿಯುತ್ತಲೇ ಅದನ್ನ ಒಲಿಸಿಕೊಳ್ಳುವುದು, ಭೀಕರವಾದ ಪರಿಸರದ ಜೊತೆಯಲ್ಲಿ ಒಂದು ಅನುಸಂಧಾನವನ್ನು ಮಾಡಿಕೊಂಡು ಬದುಕುವುದು, ಪರಿಸರದಿಂದ ಸೋಲನ್ನ ಕಂಡರೂ ಅದನ್ನ ಮತ್ತೆ ಮತ್ತೆ ಗೆಲ್ಲುವ ಯತ್ನ ಮಾಡುವುದು ಇವೆಲ್ಲ ಒಂದು ಕಾಲದಲ್ಲಿ ಮನುಷ್ಯ ಪರಿಸರದ ಜೊತೆಯಲ್ಲಿ ಮಾಡಿಕೊಂಡ ಹಲವು ಬಗೆಯ ರಾಜಿಗಳು ಎಂದೇ ನನಗೆ ಅನಿಸುತ್ತದೆ. ಆದರೆ ಮನುಷ್ಯ ಮತ್ತು ಪರಿಸರದ ನಡುವಣ ಸಂಬಂಧ ಎಂತಹದು ಎಂಬ ಪ್ರಶ್ನೆ ಇವತ್ತು ಯಾರನ್ನೂ ಕಾಡುತ್ತಿಲ್ಲ. ಮನುಷ್ಯ ಪರಿಸರದ ಕೂಸು ಅನ್ನುವಂತಹಾ ಮಾತುಗಳನ್ನು ಕೂಡ ನಾವು ಮರೆತು ಬಿಟ್ಟಿದ್ದೇವೆ. ಮನುಷ್ಯ ವೈಜ್ಞಾನಿಕವಾಗಿ ಹಲವು ಸಾಧನೆಗಳನ್ನು ಮಾಡಿದ ಹಾಗೆ, ಚಂದ್ರ ಮಂಗಳಗಳತ್ತ ಅವನ ದೃಷ್ಟಿ ಹರಿದ ಹಾಗೆ, ಆತ ಪರಿಸರದಿಂದ ದೂರವಾಗುತ್ತಿದ್ದಾನೆ. ಬೆಳದಿಂಗಳು, ಸೂರ್ಯೋದಯ, ಸೂರ್ಯಾಸ್ತ, ಮಳೆ ಬಿದ್ದ ಮರುದಿನವೇ ನಮ್ಮ ಮನೆ ಮುಂದಿನ ಬಯಲಲ್ಲಿ ಹಸಿರು ಹುಲ್ಲು ಚಿಗುರುವ ಅಚ್ಚರಿ, ಬೀಜ ಮೊಳಕೆ ಒಡೆಯುವ ಪರಿ, ಬಂಡೆ ಸಂದಿಯಲ್ಲಿ ಗಾಳಿ, ಬಿಸಿಲು ಮಳೆ ಎಲ್ಲವನ್ನ ಸಹಿಸಿಕೊಂಡು ಒಂದು ಬೀಜ ಗಿಡವಾಗಿ ಬೆಳೆಯುವ ಛಲ, ಕಾಲಕಾಲಕ್ಕೆ ಆಗುವ ಋತುಗಳ ಬದಲಾವಣೆ, ಬಾಹ್ಯಾಕಾಶದ ಹಲವು ಅಚ್ಚರಿಗಳು, ಇವೆಲ್ಲವನ್ನ ನೋಡುವ, ನೋಡಿ ಮೈಮರೆಯುವ ಬೆರಗಾಗುವ ನೂರು ಕ್ಷಣಗಳನ್ನ ನಾವು ಕಳೆದುಕೊಂಡಿದ್ದೇವೆ. ಆಧುನಿಕತೆ ಅನ್ನುವುದು ನಮ್ಮ ಮತ್ತು ಪರಿಸರದ ನಡುವೆ ಒಂದು ಕಣ್ಣು ಪಟ್ಟಿಯಾಗಿ ನಿಂತಿದೆ. ಬಹಳ ಜನರಿಗೆ ಪರಿಸರದ ನೆನಪು ಆಗುವುದೇ ಇಲ್ಲ. ಬಹಳ ಜನರಿಗೆ ಪರಿಸರ ಬೇಕಾಗಿಯೂ ಇಲ್ಲ.

ಇಲ್ಲಿ ಪರಿಸರ ಅಂದರೆ ಕೇವಲ ಮರಗಿಡ ಬಳ್ಳಿ ಮಾತ್ರವಲ್ಲ. ಅದೊಂದು ವ್ಯವಸ್ಥೆ. ಒಂದರ ಮೇಲೆ ಇನ್ನೊಂದು ಅವಲಂಬಿಸಿಕೊಂಡು ಇಡೀ ಪ್ರಪಂಚವನ್ನ ಮುನ್ನಡೆಸುವ ಒಂದು ವಿಧಾನ. ಇದರ ಕುರಿತು ಅರಿವನ್ನ ಬೆಳೆಸಿಕೊಳ್ಳುವುದೇ ಪರಿಸರ ಪ್ರೇಮ.

– *ನಾ.ಡಿಸೋಜಾ*

ಭಾರತಕ್ಕೆ ಖಾದಿ ಮತ್ತು ಗ್ರಾಮೋದ್ಯೋಗ ಅತ್ಯಗತ್ಯ!

– ಸುರೇಂದ್ರ ಕೌಲಗಿ

ಖಾದಿ ಗ್ರಾಮೋದ್ಯೋಗವಿಲ್ಲದ ನಾಡು ಸುಡುಗಾಡು. ಏಕೆಂದರೆ ೧೦೩ ಕೋಟಿ ಜನಸಂಖ್ಯೆಯಲ್ಲಿ ಕೇಂದ್ರ ಸರ್ಕಾರದ ಅಭಿಮಾನದ ಯೋಜನೆಯಾದ ಉದ್ಯೋಗ ಖಾತರಿ ಯೋಜನೆ ಕೇವಲ ೮ ಕೋಟಿ ಜನರಿಗೆ ಮಾತ್ರ ಉದ್ಯೋಗ ಕೊಟ್ಟಿದೆ. ಈ ೮ ಕೋಟಿ ಜನಕ್ಕೆ ಕೊಟ್ಟ ಕೂಲಿ ನಿಜವಾಗಿಯೂ ಉದ್ಯೋಗ ಮಾಡಿದವರಿಗೆ ದಕ್ಕಿದೆಯೇ ಇಲ್ಲವೇ ಎಂಬುದು ಪ್ರಶ್ನಾರ್ಹವಾಗಿದೆ. ಏಕೆಂದರೆ ಉದಾಹರಣೆಗೆ ೨೦೦೬-೧೨ರ ಅವಧಿಯಲ್ಲಿ ಬಿಹಾರ್‌ನಲ್ಲಿ ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ ಆ ರಾಜ್ಯಕ್ಕೆ ಕೇಂದ್ರದಿಂದ ಬಂದ ಒಟ್ಟು ರುಪಾಯಿ ೮.೧೮೯ ಕೋಟಿಗಳ ಪೈಕಿ ರೂ.೬೦೦೦ ಕೋಟಿಗಳಷ್ಟು ಮೊತ್ತ ಅವ್ಯವಹಾರಗಳ ಹೊಟ್ಟೆ ಸೇರಿತ್ತು! ಕೇಂದ್ರ ಸರ್ಕಾರದ ಜನಪರ ಎಂದು ಹೇಳಿಕೊಳ್ಳುವ ಯೋಜನೆಗಳಲ್ಲಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅತ್ಯಂತ ಕೇಂದ್ರೀಕೃತವಾದ ಯೋಜನೆಯಾಗಿದೆ. ಒಂದು ವೇಳೆ ಈ ಯೋಜನೆ ಜನರಿಂದ ರೂಪಗೊಂಡು ಜನರಿಂದಲೇ ಅನುಷ್ಠಾನಗೊಳ್ಳುತ್ತ ಗ್ರಾಮೀಣ ಅಭಿವೃದ್ಧಿ ಆಗುತ್ತಲಿದ್ದಿದ್ದರೆ ಸುಮಾರು ೮ ವರ್ಷಗಳಿಂದ ನಡೆಯುತ್ತಿರುವ ಈ ಯೋಜನೆಯ ಫಲವಾಗಿ ನಮ್ಮ ಗ್ರಾಮಗಳು ನಂದಗೋಕುಲವಾಗಿರಬಹುದಿತ್ತು. ಆದರೆ ಈ ಕೇಂದ್ರೀಕೃತ ಮತ್ತು ಭ್ರಷ್ಟ ಯೋಜನೆಯಿಂದಾಗಿ ದೇಶದ ಗ್ರಾಮಗಳು ಸುಡುಗಾಡು ಸದೃಶವಾಗಿ ಕಂಡು ಬರುತ್ತಿವೆ. ಕೆಲಸ ಮಾಡುವ ಮತ್ತು ಬುದ್ಧಿವಂತ ಹಳ್ಳಿಯ ಹುಡುಗರು ವಿದ್ಯಾಭ್ಯಾಸಕ್ಕೆಂದು ನಗರಗಳಿಗೆ ಹೋಗುತ್ತಿದ್ದರೆ, ಸಮರ್ಥ ಯುವಕರು ಗೊತ್ತುಗುರಿಯಿಲ್ಲದಂಥ ಅಡ್ಡಾದಿಡ್ಡಿ ಕೆಲಸವನ್ನು ಹುಡುಕಿಕೊಂಡು ನಗರಗಳಿಗೆ ವಲಸೆ ಹೋಗುತ್ತಿದ್ದಾರೆ. (ಹಳ್ಳಿಗಳಲ್ಲಿ ಉಳಿದವರು ಮುದುಕರು, ಮೋಟರು, ದಡ್ಡರು. ಇಂಥ ಅಸಮರ್ಥರಾದ ಜನರಿಂದ ಕೂಡಿದ ಹಳ್ಳಿಗಳು ದೇಶಕ್ಕೆ ಅನ್ನವನ್ನು ಒದಗಿಸಬಲ್ಲವೆ? ಸೈನಿಕರನ್ನು ಒದಗಿಸಬಲ್ಲವೇ? ಕೆಲಸಗಾರರನ್ನು ಒದಗಿಸಬಲ್ಲವೆ?) ಒಂದು ವರದಿಯ ಪ್ರಕಾರ ಮಳೆಯ ಅಭಾವದಿಂದ, ಬೋರ್‌ವೆಲ್‌ಗಳಲ್ಲಿಯ ನೀರಿನ ಅಭಾವದಿಂದ, ಕೆರೆಗಳ ಬತ್ತುವಿಕೆಯಿಂದ, ವಿದ್ಯುತ್ ಕೊರತೆಯಿಂದ ಕೃಷಿಮಾಡಲಾಗದೆ ೨೦೧೨ರಲ್ಲಿ ಒಟ್ಟು ೧೦೪ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇಂಥ ಆತ್ಮಹತ್ಯೆಗಳು ಒಂದು ವೇಳೆ ಉದ್ಯೋಗ ಖಾತರಿ ಯೋಜನೆ ಭರದಿಂದ ನಡೆದಿದ್ದರೆ ಏಕಾಗುತ್ತಿದ್ದವು? ಇಂಥ ಕೇಂದ್ರೀಕೃತ ಯೋಜನೆಗಳಿಂದಾಗಿ ಪ್ರತಿ ಭಾರತೀಯನಮೇಲೂ ಮಕ್ಕಳು, ಮುದುಕರೂ ಸೇರಿದಂತೆ ೨೨ಸಾವಿರ ರೂಪಾಯಿಗಳ ಸಾಲವಿದೆ. ಹಳ್ಳಿಗಳಲ್ಲಿ ಮಾಡಬಹುದಾದಂಥ ಉದ್ಯೋಗಗಳನ್ನು ಸೃಷ್ಟಿಸಿಲ್ಲದರ ಪರಿಣಾಮವಾಗಿ

ಗ್ರಾಮೀಣರೆಲ್ಲರು ಅಲಸಿಗರಾಗಿದ್ದಾರೆ. ಈ ವಿಷಯವಾಗಿ ದೇಸಿ ಸಂಸ್ಕೃತಿಯ ಪ್ರತಿಪಾದಕ ಪ್ರಸನ್ನರವರು ಏನು ಹೇಳುತ್ತಾರೆ ಎಂಬುದನ್ನು ನೋಡೋಣ. ಪ್ರಾಯಶಃ ಮಾನವ ಇತಿಹಾಸದಲ್ಲೇ ಹಿಂದೆಂದೂ ಕೈಕೆಲಸವೆಂಬುದು ಇಷ್ಟೊಂದು ಹೀನಾಯ ಸ್ಥಿತಿ ತಲುಪಿರಲಿಲ್ಲವೆಂದು ಕಾಣುತ್ತದೆ. ಹಳ್ಳಿಗಾಡಿನಲ್ಲಿ ಬದುಕುತ್ತಿರುವ ಯಾರಿಗೇ ಆದರೂ ಕಾಣುತ್ತಿರುವ ಕಟುಸತ್ಯವಿದು. ಸ್ವಾತಂತ್ರ್ಯಾನಂತರದ ಭಾರತದಲ್ಲಿ ಅದರಲ್ಲೂ ಗ್ರಾಮೀಣ ಪ್ರದೇಶದಲ್ಲಿ ಗಂಡಸರ ನಡುವೆ ಬಂದಿರುವ ಮಹತ್ತರವಾದ ಬದಲಾವಣೆ ಎಂದರೆ ಮೈಗಳ್ಳತನ. ಹಳ್ಳಿಯ ಯಾವ ಮನೆಯಲ್ಲಿಯೂ ಗುಡಿಕೈಗಾರಿಕೆ ನಡೆ-ಯದೇ ಇರುವುದರಿಂದ ಸಂತ ವಿನೋಬಾ ಹೇಳಿದಂತೆ ಗುಡಿಕೈಗಾರಿಕೆಗಳಿಲ್ಲದಂಥ ಮನೆಗಳೆಲ್ಲ ಗೆದ್ದಲು ಹಿಡಿದಂತೆ. ರೈತರು ಕೃಷಿಯಲ್ಲಿ ನಷ್ಟ ಅನುಭವಿಸಿ ಆತ್ಮ ಹತ್ಯೆ ಮಾಡಿಕೊಳ್ಳುತ್ತಿದ್ದರೆ, ಗುಡಿ ಕೈಗಾರಿಕೆ ಅಥವಾ ಗ್ರಾಮೋದ್ಯೋಗಗಳ ಅಭಾವದಿಂದಾಗಿ ಯುವತಿಯರು ದೊಡ್ಡ ಸಂಖ್ಯೆಯಲ್ಲಿ ಕಣ್ಮರೆಯಾಗುತ್ತಿದ್ದಾರೆ. ಹಳ್ಳಿಯ ಮಕ್ಕಳು ಕೂಡ ಯಾವ ಉದ್ಯೋಗವಿಲ್ಲದೆ ಆದರ್ಶವಿಲ್ಲದೆ ಸರಿಯಾದ ಪೋಷಣೆಯಿಲ್ಲದೆ ಕಣ್ಮರೆಯಾಗುತ್ತಿದ್ದಾರೆ. 'ಬಾಲ್ಯ ಉಳಿಸಿ' ಆಂದೋಲನ ಎಂಬ ಸಾಮಾಜಿಕ ಸಂಸ್ಥೆ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ಒಂದು ವರದಿ ಪ್ರಕಾರ ೨೦೦೮ ರಿಂದ ೨೦೧೦ರ ವರೆಗೆ ಎರಡು ವರ್ಷಗಳ ಅವಧಿಯಲ್ಲಿ ೧,೭೦,೦೦೦ ಮಕ್ಕಳು ಕಣ್ಮರೆಯಾಗಿದ್ದಾರೆ. ಒಂದು ವೇಳೆ ಕೇಂದ್ರ ಸರ್ಕಾರ ಹೇಳಿಕೊಳ್ಳುವಂತೆ ಮಹಾತ್ಮಾ ಗಾಂಧೀ ಉದ್ಯೋಗ ಭರವಸೆಯು ಅದರ ಅಭಿಲಾಷೆಯಂತೆ ನಡೆದಿದ್ದರೆ ಹಳ್ಳಿಗಳದು ಇಂಥ ಶೋಚನೀಯ ಪರಿಸ್ಥಿತಿ ಏಕಾಗುತ್ತಿತ್ತು? ಸರ್ಕಾರ ಸ್ಥಾಪಿಸುವ ಬೃಹತ್ ಕೈಗಾರಿಕಾಕರಣದಿಂದಾಗಿ ಇರುವ ಸೀಮಿತ ಭೂ ಪ್ರದೇಶ ದಿನೇ ದಿನೇ ಕಡಿಮೆಯಾಗುತ್ತಲಿದೆ. ನಗರೀಕರಣವು ಭರದಿಂದ ಸಾಗಿದೆ. ಇದೆಲ್ಲದರ ಪರಿಣಾಮ ಕೃಷಿಯ ಮೇಲೆ ಆಗದೆ ಇರುವುದಿಲ್ಲ. ಯಾವಾಗ ಕೃಷಿಯು ದುರ್ಬಲವಾಯಿತೊ ಆಗ ದೇಶದ ಆರ್ಥಿಕ ಪರಿಸ್ಥಿತಿ ಚಿಂತಾಜನಕವಾಯಿತು. ಇತ್ತೀಚಿಗೆ ಕೇಂದ್ರ ಅಂಕಿ-ಸಂಖ್ಯಾ ಸಂಸ್ಥೆ ಬಿಡುಗಡೆ ಮಾಡಿರುವ ಪ್ರಕಾರ ದೇಶದ ಒಟ್ಟು ಆದಾಯ ೨೦೧೨-೧೩ಕ್ಕೆ ಶೇ.೫ ರಷ್ಟಕ್ಕೆ ಇಳಿಯಲಿದೆ. ಇದು ಕಳೆದ ಹತ್ತು ವರ್ಷಗಳಲ್ಲಿ ಅತ್ಯಂತ ಕಡಿಮೆ ಜಿ.ಡಿ.ಪಿ ಪ್ರಮಾಣವಾಗಿದೆ. ಇದಕ್ಕೆ ಕಾರಣ ಕೃಷಿಯಲ್ಲಿ ಉಂಟಾಗಿರುವ ತಲ್ಲಣವೇ ಅಗಿದೆ. ಇದೇ ರೀತಿ ಮುಂದುವರೆದಲ್ಲಿ ದೇಶ ಭೀಕರ ಅಹಾರ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ.

ಸುಮಾರು ೯ ವರ್ಷಗಳ ಹಿಂದೆ ಕೇಂದ್ರ ಸರ್ಕಾರ ಪ್ರತಿದಿನ ೨೦೦ ಕೋಟಿ ಸಾಲ ಮಾಡುತ್ತಿತ್ತು. ಈಗ ಅದಕ್ಕೆ ೧೮೦೦ ಕೋಟಿ ಸಾಲ ಮಾಡುವ ಪರಿಸ್ಥಿತಿ ಒದಗಿದೆ. ಇದಕ್ಕೆ ಕಾರಣವೇನೆಂದರೆ ಕೃಷಿ ಮತ್ತು ಖಾದಿಗ್ರಾಮೋದ್ಯೋಗಗಳಂಥ ಉದ್ಯೋಗಗಳನ್ನು ಪ್ರತಿ ಹಳ್ಳಿಯಲ್ಲಿ ಸೃಷ್ಟಿಸುವ ಬದಲಾಗಿ ಕೇಂದ್ರ ಸರ್ಕಾರವು ಭೋಗ ವಿಲಾಸದ ಪದಾರ್ಥಗಳ ತಯಾರಿಕೆಗೆ ಪ್ರಾಧಾನ್ಯತೆ ಕೊಟ್ಟಿದೆ. ಒರಿಸ್ಸಾದಲ್ಲಿ ಉತ್ತರ ಕೊರಿಯಾದ ಪೋಸ್ಕೊ ಕಂಪನಿಯಿಂದ ೫೨ ಸಾವಿರ ಕೋಟಿ ರೂಪಾಯಿ ಖರ್ಚುಮಾಡಿ ಉಕ್ಕಿನ ಕಾರ್ಖಾನೆ ಪ್ರಾರಂಭಿಸಲಿದೆ. ಈ ಉಕ್ಕಿನ ಕಾರ್ಖಾನೆಯ ಸ್ಥಾಪನೆಗಾಗಿ ಖರ್ಚುಮಾಡುವ ಹಣಕ್ಕೂ ಆ ಕಾರ್ಖಾನೆಯಿಂದ ದೊರೆಯುವ

ಉದ್ಯೋಗದ ಸಂಖ್ಯೆಗೂ ಮತ್ತು ಒಂದು ಸಾವಿರ ಎಕರೆ ಭೂಮಿಯಿಂದ ವರ್ಷ ವರ್ಷ ಪಡೆಯಬಹುದಾದ ಕೃಷಿ ಉತ್ಪಾದನೆಯ ಪ್ರಮಾಣದ ಅನುಪಾತಕ್ಕೂ ಸಂಬಂಧವೇ ಇಲ್ಲ. ಅದಕ್ಕೆ ಬದಲಾಗಿ ಖಾದಿ ಮತ್ತು ಗ್ರಾಮೋದ್ಯೋಗಗಳಿಗೆ ಹಣ ತೊಡಗಿಸಿದ್ದರೆ ಇನ್ನು ಹೆಚ್ಚಿನ ದೊಡ್ಡ ಸಂಖ್ಯೆಯಲ್ಲಿ ಜನರಿಗೆ ಅವರ ಸ್ಥಳದಲ್ಲೇ ಉದ್ಯೋಗ ಕೊಡಬಹುದಿತ್ತು. ಇಂಥದೇ ಇನ್ನೊಂದು ಉದಾಹರಣೆ ನಮ್ಮ ಕರ್ನಾಟಕದಲ್ಲಿ ಆಗಲಿದೆ. ಕರ್ನಾಟಕ ಸರ್ಕಾರ ೨೦೧೩-೨೦೨೩ನೇ ಸಾಲಿಗೆ ವೈಮಾನಿಕರಣದ ನೀತಿಯನ್ನು ಪ್ರಕಟಿಸಿದೆ. ಆ ಯೋಜನೆಯ ಪ್ರಕಾರ ಮೊದಲ ಹಂತದಲ್ಲಿ ೨೪ ಸಾವಿರ ಕೋಟಿ, ೨೦೧೩ ರಿಂದ ೧೮ನೇ ಸಾಲಿನ ಎರಡನೇ ಅವಧಿಯಲ್ಲಿ ೩೬ಸಾವಿರ ಕೋಟಿ ಹಣವನ್ನು ತೊಡಗಿಸಿ ಉದ್ಯೋಗವನ್ನು ಸೃಷ್ಟಿಸುವುದಾಗಿ ಹೇಳಿಕೊಂಡಿದೆ. ಉಂಟಾಗಬಹುದಾದ ಉದ್ಯೋಗದ ಸಂಖ್ಯೆ ಒಂದು ಲಕ್ಷ ಮಾತ್ರ. ಅಂದರೆ ಒಬ್ಬ ವ್ಯಕ್ತಿಗೆ ಉದ್ಯೋಗ ಕೊಡಲು ೬೦ ಸಾವಿರ ರೂ ಬಂಡವಾಳ ತೊಡಗಿಸಿದಂತಾಗುತ್ತದೆ. ಈ ರೀತಿ ಒಂದು ಉದ್ಯೋಗ ಸೃಷ್ಟಿಸುವುದಕ್ಕೆ ಕೋಟಿಗಟ್ಟಲೆ ಹಣವನ್ನು ಖರ್ಚುಮಾಡಿ ಉದ್ಯೋಗ ಸೃಷ್ಟಿಸುವ ಕೆಲಸವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಾಡುತ್ತಿವೆ. ಅಲ್ಲದೆ ಈ ಎಲ್ಲ ಉದ್ಯೋಗಗಳು ಕೇಂದ್ರೀಕೃತ ಕೈಗಾರಿಕೆಯಲ್ಲಿ ಇರುತ್ತವೆ. ಮತ್ತು ಈ ಕೈಗಾರಿಕೆಗಳು ಹುಟ್ಟಿದಲೆಲ್ಲಾ ಕೊಳಚೆ ಪ್ರದೇಶ ಉಂಟಾಗುತ್ತದೆ. ಮೇಲ್ಕಾಣಿಸಿದ ಉದಾಹರಣೆಗಳಲ್ಲಿ ಒಂದು ಲಕ್ಷಕ್ಕಿಂತ ಹೆಚ್ಚು ಜನರಿಗೆ ಉದ್ಯೋಗ ಕೊಡುವುದಕ್ಕಾಗಿ ಬೆಂಗಳೂರು, ಮೈಸೂರು, ಮಂಗಳೂರು, ದಾವಣಗೆರೆ, ಬೆಳಗಾವಿ ಮುಂತಾದೆಡೆಯಲ್ಲೆಲ್ಲ ವೈಮಾನಿಕರಣಕ್ಕೆ ಸಂಬಂಧಿಸಿದಂಥ ಉದ್ಯೋಗಗಳನ್ನು ಸೃಷ್ಟಿಸಲು ಪ್ರಯತ್ನಿಸಲಾಗುವುದು. ಅಲ್ಲೆಲ್ಲ ಪುನಃ ಭೂಮಿಯ ವಶೀಕರಣ, ರೈತರ ಉಚ್ಚಾಟನೆ ಇತ್ಯಾದಿ ಎಲ್ಲವೂ ನಡೆಯುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಖಾದಿ ಮತ್ತು ಗ್ರಾಮೋದ್ಯೋಗ ಕ್ಷೇತ್ರದಲ್ಲಿ ಉದ್ಯೋಗವಕಾಶ ಸೃಷ್ಟಿಸಲು ಕೋಟಿಗಟ್ಟಲೆ ಹಣ ಬೇಕಿಲ್ಲ. ಅಲ್ಲದೆ ಪರಿಸರನಾಶವೂ ಆಗುವುದಿಲ್ಲ. ರೈತರು ಬೆಳೆದ ವಿವಿಧ ಫಸಲುಗಳೇ ಈ ಕೈಗಾರಿಕೆಗಳಿಗೆ ಕಚ್ಚಾ ಪದಾರ್ಥ ಆಗುವುದರಿಂದ ಕೃಷಿಗೂ ಕೂಡ ಪ್ರೋತ್ಸಾಹ ಸಿಕ್ಕಿದಂತಾಗುತ್ತದೆ. ಕರ್ನಾಟಕದಲ್ಲಿಯ ಒಂದು ಉದಾಹರಣೆ ತೆಗೆದುಕೊಂಡು ಹೇಳುವುದಾದರೆ ಕೇವಲ ಒಂದು ಕೋಟಿ ರೂಪಾಯಿ ಕೇಂದ್ರ ಸರ್ಕಾರದ ಸಹಾಯದಿಂದ ಬಾಗಲಕೋಟೆ ಜಿಲ್ಲೆಯಲ್ಲಿ ೧೩೦೦ ಜನರಿಗೆ ಉದ್ಯೋಗ ಕೊಡಲಾಗಿದೆ. ಕರ್ನಾಟಕದಲ್ಲಿ ಒಟ್ಟು ೩೨ ಸಾವಿರ ಜನ ನೂಲುಗಾರಿಕೆ ಮತ್ತು ನೇಕಾರಿಕೆಯಲ್ಲಿ ತೊಡಗಿದ್ದಾರೆ. ೩೯ ಸಾವಿರ ಜನ ನಾರಿನ ಉದ್ಯೋಗದಲ್ಲಿ ತೊಡಗಿದ್ದಾರೆ. ಎಲ್ಲಿಯೂ ಪರಿಸರ ನಾಶವಿಲ್ಲ ಮತ್ತು ಕೊಳಗೇರಿಯಿಲ್ಲ. ಇಂಗ್ಲೆಂಡ್‌ನಲ್ಲಿ ಕೈಗಾರಿಕಾ ಕ್ರಾಂತಿ ಆದ ಮೇಲೆ ಹೊಸದೊಂದು ಆರ್ಥಿಕ ನೀತಿ ಉಂಟಾಯಿತು. ಆ ಆರ್ಥಿಕ ನೀತಿ ಶೋಷಣೆಯುಕ್ತ ಪರಿಸರ ವಿರೋಧಿ ಕೇಂದ್ರೀಕೃತ ಅರ್ಥವ್ಯವಸ್ಥೆ ಆಗಿತ್ತು. ಆದರೆ ಗಾಂಧೀಜಿಯವರು ಪ್ರತಿಪಾದಿಸಿದ ಖಾದಿ-ಗ್ರಾಮೋದ್ಯೋದ ನೀತಿ ಎಲ್ಲರಿಗೂ ಸಮಪಾಲು, ಎಲ್ಲರಿಗೂ ಸಮಬಾಳು ಎಂಬ ಅರ್ಥ ನೀತಿಯನ್ನು ಪ್ರತಿಪಾದಿಸಿತ್ತು.

ನಮ್ಮ ಪ್ರಧಾನಿಯವರು ಮಹಾತ್ಮ ಗಾಂಧೀಯವರನ್ನು ಹೊಗಳುವುದರಲ್ಲಿ

ದಣಿವನ್ನೇ ಕಾಣುವುದಿಲ್ಲ. ಗಾಂಧೀಜಿಯವರ ಅಭಿವೃದ್ಧಿ ಮಾದರಿಯೇ ಸರಿಯಾದ ಮಾದರಿ ಎಂದೂ ಹೇಳುತ್ತಾರೆ. ಅದರೆ ಅವರು ಅತಿಯಾದ ಕೊಳ್ಳುಬಾಕ ಸಂಸ್ಕೃತಿಯನ್ನು ಹೆಚ್ಚಿಸುವುದರ ಮೂಲಕ ದೇಶದ ಆರ್ಥಿಕ ಸ್ಥಿತಿಯನ್ನು ಉನ್ನತೀಕರಣಗೊಳಿಸಲು ಪ್ರಯತ್ನಿಸುತ್ತಾರೆ. ಗಾಂಧೀಜಿ ಪ್ರತಿಯೊಬ್ಬ ಮತದಾರನು ತನ್ನ ಜೀವನಕ್ಕಾಗಿ ಸರ್ಕಾರದಿಂದ ಸಹಾಯ ಪಡೆಯದೇ ಸ್ವಾವಲಂಬಿಯಾಗಿರಬೇಕು ಎಂದು ಹೇಳಿದ್ದರು. ಇತ್ತೀಚಿಗೆ ಬಿಡುಗಡೆಗೊಂಡ ರಾಜ್ಯದ ೨೦೧೨-೧೩ನೇ ಸಾಲಿನ ಆರ್ಥಿಕ ವರದಿ ಪ್ರಕಾರ ನಿರೀಕ್ಷಿತ ೧೨೫ ಲಕ್ಷ ಟನ್ ಆಹಾರಧಾನ್ಯದ ಉತ್ಪಾದನೆ ಬದಲಾಗಿ ೧೧೪ ಲಕ್ಷ ಟನ್‌ಗೆ ಇಳಿಯಲಿದೆ. ಅಂದರೆ ೧೧ ಲಕ್ಷ ಟನ್ ಕಡಿಮೆಯಾಗಲಿದೆ. ೨೦೧೨-೧೩ಕ್ಕೆ ೧೩೬.೫೫ ಲಕ್ಷ ಟನ್‌ಗಳ ಇಳುವರಿಯನ್ನು ನಿರೀಕ್ಷಿಸಲಾಗಿತ್ತು. ಆದರೆ ಬರಗಾಲದ ಕಾರಣದಿಂದ ಇಳುವರಿ ಕಡಿಮೆಯಾಯಿತು. ೧೫೭ ತಾಲ್ಲೂಕುಗಳಲ್ಲಿ ಬರ ಇದ್ದುದ್ದರಿಂದ ಇಳುವರಿ ಕಡಿಮೆಯಾಯಿತು. ಹೀಗೆ ಕೃಷಿ ಕ್ಷೇತ್ರ ವರ್ಷ ವರ್ಷ ಕ್ಷೀಣಿಸುತ್ತಲೇ ಇದೆ. ಕಳೆದ ಮೂರು ವರ್ಷಗಳಲ್ಲಿ ಉದ್ಯೋಗ ಖಾತರಿ ಯೋಜನೆಯಲ್ಲಿ ದೊಡ್ಡ ಕುಸಿತ ಉಂಟಾಗಿದೆ. ೨೮೪ ದಿನಗಳ ಉದ್ಯೋಗ ಖಾತರಿ, ೨೧೧ ದಿನಕ್ಕೆ ಇಳಿದಿದೆ. ಮುಂದಿನ ವರ್ಷಗಳಲ್ಲಿ ಇನ್ನು ಹೆಚ್ಚು ಕುಸಿತವಾಗುವ ಲಕ್ಷಣಗಳಿವೆ. ಉದ್ಯೋಗ ಖಾತರಿ ಯೋಜನೆ ಕೋಟ್ಯಾಂತರ ಬಡಜನರಿಗೆ ಒಂದು ಸುರಕ್ಷಿತ ನೆಲೆಯನ್ನು ಮಾಡಿಕೊಟ್ಟಿತ್ತು. ಆದರೆ ಅನೇಕ ಸ್ಥಳಗಳಲ್ಲಿ ಆಡಳಿತದ ದೌರ್ಬಲ್ಯದಿಂದ ಅನೇಕ ಜನರು ನಿರುದ್ಯೋಗಿಗಳಾಗಿ ನಗರಕ್ಕೆ ವಲಸೆಹೋಗುತ್ತಿದ್ದಾರೆ. ಈ ಯೋಜನೆಯನ್ನು 'ಮುಳುಗುತ್ತಿರುವ ಹಡಗು' ಎಂದು ಒಂದು ಪತ್ರಿಕೆ ಕರೆದಿದೆ. ಸರ್ಕಾರದ ಯೋಜನೆಗಳಿಂದ ವಲಸೆಯನ್ನು ತಪ್ಪಿಸಲು ಸಾಧ್ಯವಾಗದೇ ಇರುವಾಗ ಮತ್ತು ವರ್ಷವಿಡೀ ಹಾಗು ಬಿಡುವಿನ ವೇಳೆಯಲ್ಲಿ ಸಾರ್ವತ್ರಿಕವಾಗಿ ಹೆಂಗಸರು ಮಕ್ಕಳಾದಿಯಾಗಿ ಎಲ್ಲರಿಗೂ ಉದ್ಯೋಗ ಸಿಗುವಂತಾಗಬೇಕಾದರೆ ದೇಶದಲ್ಲಿ ಖಾದಿ ಮತ್ತು ಗ್ರಾಮೋದ್ಯೋಗಗಳನ್ನು ಯಥೇಚ್ಛವಾಗಿ ಬಳಸಬೇಕು. ಪ್ರತಿಯೊಬ್ಬ ಮನುಷ್ಯನಿಗೆ ಪ್ರಧಾನವಾಗಿ ಮೂರು ಪದಾರ್ಥಗಳು ಬೇಕೇ ಬೇಕು. ಒಂದನೆಯದು ಆಹಾರ, ಎರಡನೆಯದು ಬಟ್ಟೆ, ಮೂರನೆಯದು ವಸತಿ. ಈ ಮೂರೂ ಪದಾರ್ಥಗಳನ್ನು ತಯಾರಿಸಲು ಮುಖ್ಯವಾಗಿ ಬೇಕಾದುದು ಬುದ್ಧಿ, ಉಪಕರಣ ಮತ್ತು ಬಂಡವಾಳ. ಈ ಮೂರೂ ಮೂಲಭೂತ ಅಂಶಗಳು ಮನುಷ್ಯನಲ್ಲಿಯೇ ಇವೆ. ಆಲೋಚಿಸಲು ಬುದ್ಧಿಯಿದೆ. ಉತ್ಪಾದಿಸಲು ಕೈಗಳಿವೆ ಮತ್ತು ಬಂಡವಾಳ ಒದಗಿಸಲು ಪ್ರಕೃತಿಯಿದೆ. ಈ ಮೂರೂ ಅಂಶಗಳ ಸಂಯೋಜನೆಯಿಂದ ಯಾವ ಸ್ಥಳದಲ್ಲಾದರೂ ಗ್ರಾಮೋದ್ಯೋಗವನ್ನು ಸೃಷ್ಟಿಸಬಹುದಾಗಿದೆ. ದೊಡ್ಡ ಕೈಗಾರಿಕೆಗಳಲ್ಲಿಯಂತೆ ವಿಶಾಲವಾದ ಭೂಮಿ, ಬಹುದೊಡ್ಡ ಕಟ್ಟಡ, ಹಣದ ರೂಪದಲ್ಲಿ ಬಂಡವಾಳ ಬೇಕಿಲ್ಲ. ಗ್ರಾಮೋದ್ಯೋಗಗಳಲ್ಲಿ ತೊಡಗಿರುವವರಿಗೆ ಶ್ರಮದ ಬೆಲೆ ಮತ್ತು ಪ್ರಕೃತಿ ಸಂಪತ್ತಿನ ಬೆಲೆ ಗೊತ್ತಾಗುತ್ತದೆ. ಅವನ ಅನುಭವವೇ ಅವನಿಗೆ ಪಾಠಶಾಲೆಯಾಗುತ್ತದೆ. ಬಟ್ಟೆ ತಯಾರಿಸುವ ಖಾದಿ ಉದ್ಯಮದ ಬೆಳವಣಿಗೆಗೆ ಮಿತಿಯೇ ಇಲ್ಲ, ಅದಕ್ಕೆ ಆಕಾಶವೇ ಮಿತಿ. ವಿಕೇಂದ್ರಿತವಾದಷ್ಟೂ ಗ್ರಾಮೋದ್ಯೋಗಗಳು ಹೆಚ್ಚು ಆಕರ್ಷಕವಾಗಿ ಉತ್ಪತ್ತಿಯಾಗುತ್ತದೆ.

ಆ ಉದ್ಯೋಗಗಳಲ್ಲಿ ತೊಡಗಿರುವವರಲ್ಲಿ ಸಹಕಾರ ಮನೋಭಾವನೆ ಮತ್ತು ಆತ್ಮಾಭಿಮಾನ ಸಹಜವಾಗಿ ಬೆಳೆಯುತ್ತವೆ. ಗ್ರಾಮದಲ್ಲಿಯ ಪ್ರತಿಯೊಂದು ಮನೆಯೂ ಉದ್ಯೋಗಗಳ ಚಟುವಟಿಕೆಯಿಂದ ಕೂಡಿದಂತಾಗುತ್ತದೆ. ಮನೆಗಳಲ್ಲಿ ಉದ್ಯೋಗದ ವಾತಾವರಣ ಸೃಷ್ಟಿಯಾಗುವುದರಿಂದ ಮಕ್ಕಳು ಬುದ್ಧಿವಂತರೂ, ಆರೋಗ್ಯವಂತರೂ ಮತ್ತು ಚಟುವಟಿಕೆಯುಳ್ಳವರಾಗುತ್ತಾರೆ. ಕೃಷಿ ಅಭಿವೃದ್ಧಿಯಾಗುತ್ತದೆ. ಈಗಿನಂತೆ ಕೃಷಿ ಕೊನೆ ಸ್ಥಾನಕ್ಕಿಳಿದು ಗ್ರಾಮಗಳು ನಿಸ್ತೇಜಗೊಳ್ಳುವುದಿಲ್ಲ. ಬದಲಿಗೆ ಜೇನುಗೂಡಿನಂತೆ ಕ್ರೀಯಾಶೀಲತೆಯುಳ್ಳವಾಗುತ್ತವೆ. ಪ್ರಕೃತಿಯಲ್ಲಿ ಸಿಗುವ ಯಾವ ಪದಾರ್ಥವನ್ನೂ ಹಾಳು ಮಾಡುವ ಮನೋಭಾವ ಇಲ್ಲದಾಗುತ್ತದೆ. ಮುಖ್ಯವಾಗಿ ನೀರಿನ ಉಪಯೋಗ ಸರಿಯಾಗಿ ಆಗುತ್ತದೆ. ಆಗ ಗ್ರಾಮಗಳಲ್ಲಿ ನಡೆಯುವ ಗ್ರಾಮಸಭೆ ಇಂದಿನಂತೆ ತೋರಿಕೆಯೇ ಅಥವಾ ನಾಟಕೀಯವಾಗದೆ, ಪ್ರಜಾಪ್ರಭುತ್ವದ ಚೈತನ್ಯದೊಂದಿಗೆ ಅದು ನಡೆಯುತ್ತದೆ. ಹಳ್ಳಿಯಲ್ಲಿಯ ಶಾಲಾ ಶಿಕ್ಷಣವೂ ಕೂಡ ಕೇವಲ ಹಣ ಸಂಪಾದನೆಯ ಸರ್ಟಿಫಿಕೇಟ್ ಪಡೆಯುವ ಶಿಕ್ಷಣವಾಗದೆ, ಜೀವನ ನಡೆಸಲು ಬೇಕಾದ ಶಿಕ್ಷಣವನ್ನು ಕೊಡುವಂಥ ಶಾಲೆಗಳಾಗುತ್ತವೆ. ಇಂಗ್ಲಿಷ್ ಕ್ಯಾಲೆಂಡರ್‌ನ ಅನುಸಾರ ಹಳ್ಳಿಗರ ಜೀವನ ನಡೆಯದೆ ಋತುಮಾನಗಳ ಅನುಸಾರ ಜೀವನ ನಡೆಯುತ್ತದೆ. ಭಾರತದಲ್ಲಿಯ ಹಳ್ಳಿಗಳು ಕುಂಠಿತಗೊಳ್ಳುತ್ತಿರುವುದರ ಬಗ್ಗೆ ಕವಿ ರವೀಂದ್ರರು ವಿಷಾದ ವ್ಯಕ್ತಪಡಿಸಿ, "ಇಂದು ಹಳ್ಳಿಗಳಲ್ಲಿಯ ದೀಪ ಆರಿವೆ. ಕೃತಕವಾದ ದೀಪ ನಗರಗಳಲ್ಲಿ ಬೆಳಗುತ್ತಿದೆ. ಆದೀಪ ಸೂರ್ಯಚಂದ್ರ ಮತ್ತು ತಾರೆಗಳ ಸಂಗೀತವನ್ನು ಪ್ರತಿಬಿಂಬಿಸುವುದಿಲ್ಲ. ಪ್ರತಿ ಮುಂಜಾವಿನಲ್ಲಿ ಮಾಡಲಾಗುತ್ತಿದ್ದ ಪ್ರಾರ್ಥನೆಗಳು ಕಣ್ಮರೆಯಾಗಿವೆ. ಪ್ರತಿ ಸೂರ್ಯಾಸ್ತ ಸಮಯದಲ್ಲಿ ಹಚ್ಚಲಾಗುತ್ತಿದ್ದ ದೀಪ ನಂದಿದೆ. ಕೆರೆಗಳಲ್ಲಿ ನೀರು ಮಾತ್ರವಲ್ಲದೆ ಹೃದಯ ಕೂಡ ಒಣಗಿದೆ. ಜೀವನೋತ್ಸಾಹದೊಂದಿಗೆ ಸಹಜವಾಗಿ ಅರಳುತ್ತಿದ್ದ ಕುಣಿತಗಳು ಮತ್ತು ಹಾಡುಗಳೆಲ್ಲವೂ ಧೂಳುಪಾಲಾಗಿದೆ. ಇದುವರೆಗೆ ಮಾನವ ಹೃದಯ ತನ್ನ ಸಹಜ ಸಂತೋಷದಿಂದ ಕಲಾತ್ಮಕ ಕೃತಿಗಳನ್ನು ರಚಿಸುತ್ತಿತ್ತು. ಇದು ಅದು ಬರಡಾಗಿದೆ. ಇದು ಅದು ಯಂತ್ರಗಳಿಂದ ತಯಾರಿಸಲ್ಪಟ್ಟ ಮನೋರಂಜನೆಯನ್ನು ಅವಲಂಬಿಸಬೇಕಾಗಿದೆ. ಅವುಗಳ ಮೇಲಿನ ಅವಲಂಬನೆ ಹೆಚ್ಚಿದಷ್ಟು ಹಳಿಗರ ಕ್ರಿಯಾತ್ಮಕತೆ ಕುಂಠಿತಗೊಳ್ಳುತ್ತದೆ."

ನೆಹರೂ ಮಾದರಿಯ ಅಭಿವೃದ್ಧಿ ನೀತಿಯನ್ನು ಕೇಂದ್ರ ಸರ್ಕಾರ ಅನುಸರಿಸುತ್ತಿರುವುದರಿಂದ ನಗರೀಕರಣ ಹೆಚ್ಚಿತು. ನಗರಗಳಲ್ಲಿ ಲೆಕ್ಕವಿಲ್ಲದಷ್ಟು ಗುಡಿಸಲುಗಳು ತಲೆಯೆತ್ತಿದವು. ಇದರಿಂದ ಜನಸಂಖ್ಯೆಯಲ್ಲಿ ಹೆಚ್ಚಳ, ಕೊಳಕು, ದುರಾಚಾರ, ಜೂಜು ಮುಂತಾದ ಭೀಷಣ ಸಮಸ್ಯೆಗಳು ಮುಪ್ಪರಿಗೊಂಡವು. ಗ್ರಾಮೀಣ ಕಲೆ ಮತ್ತು ಅಭಿಕ್ರಮ ನಾಶವಾಗಿ ಹೋಯಿತು. ಆದರೆ ಇದಕ್ಕೆ ಪರ್ಯಾಯವಾಗಿ ಗಾಂಧೀ ಪ್ರತಿಪಾದಿಸಿದ್ದ ಗ್ರಾಮಾದ್ಯೋಗ ಪ್ರಧಾನ ನೀತಿಯನ್ನು ಅನುಸರಿಸಿದ್ದರೆ, ನಗರಗಳ ಬೆಳವಣಿಗೆ ಹತೋಟಿಯಲ್ಲಿರುತ್ತಿತ್ತು. ಗ್ರಾಮಗಳು ಸ್ವಚ್ಛ, ಸುಂದರ ಹಾಗೂ ಸಮೃದ್ಧವಾಗಿರುತ್ತಿದ್ದವು. ಪ್ರತಿಯೊಬ್ಬರೂ ತಮ್ಮ ಮನೆಯ ಹಿಂದೆ ತರಕಾರಿ ಬೆಳೆಯುವ ಮಟ್ಟಿಗಾದರೂ ಕೈತೋಟದ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದರು. ನಗರದಲ್ಲಿ ಜನದಟ್ಟಣೆ ಕಡಿಮೆಯಾಗಿ ಅಲ್ಲಿಯೂ ಸುವ್ಯವಸ್ಥೆ ನೆಲಸಿ, ಅದರ ಸೌಂದರ್ಯ

ಇನ್ನೂ ಹೆಚ್ಚುತ್ತಿತ್ತು. ಗ್ರಾಮ ಮತ್ತು ನಗರಗಳಲ್ಲಿ ಲೋಕಕಲೆ ವಿಕಸಿತಗೊಳ್ಳುತ್ತಿದ್ದುದ್ದಲ್ಲದೆ ಗುಂಡಾಗಿರಿ ಮತ್ತು ಅಪರಾಧದಂತಹ ಘೋರ ಕೃತ್ಯಗಳು ಹೆಚ್ಚಾಗಿ ಘಟಿಸುತ್ತಿರಲಿಲ್ಲ. ಇದುವರೆಗೆ ಆಗಿ ಹೋದ ೧೧ ಪಂಚವಾರ್ಷಿಕ ಯೋಜನೆಗಳು ಮತ್ತು ಈಗಿನ ೧೨ನೇ ಪಂಚವಾರ್ಷಿಕ ಯೋಜನೆಯು ಗಾಂಧೀ ಪ್ರತಿಪಾದಿಸಿದ್ದ ಮಾದರಿಯ ಗ್ರಾಮ ಪ್ರಧಾನವಾದ ಅಭಿವೃದ್ಧಿ ನೀತಿಯನ್ನು ಅನುಸರಿಸಿದ್ದರೆ ಇಂದು ದೇಶದಲ್ಲಿ ಆಧುನಿಕತೆ ಎಂಬ ಹೆಸರಿನ ಸಮಸ್ಯೆಗಳು ಯಾವೂ ಇರುತ್ತಿರಲಿಲ್ಲ. ಹಿಂಸಾಚಾರ ಶೂನ್ಯಪ್ರಮಾಣದಲ್ಲಿರುತ್ತಿತ್ತು. ದೇಶದ ರಕ್ಷಣೆಗಾಗಿ ಆಗುತ್ತಿರುವ ಮಿಲಿಯನ್‌ಗಟ್ಟಲೆ ಡಾಲರ್ ಖರ್ಚಾಗುತ್ತಿರಲಿಲ್ಲ. ಏಕೆಂದರೆ ದೇಶದ ಹಳ್ಳಿಗಳೇ ಹಾಗೂ ಹಳ್ಳಿಗಳಲ್ಲಿರುವ ಜನರೇ ಆರ್ಥಿಕವಾಗಿ, ಭೌತಿಕವಾಗಿ, ಶಾರೀರಿಕವಾಗಿ ಬಲಾಢ್ಯರಾಗಿದ್ದು ದೇಶದ ರಕ್ಷಣೆಯ ಎರಡನೇ ಹಂತವಾಗಿರುತ್ತಿದ್ದರು. ಲಂಗು-ಲಗಾಮಿಲ್ಲದ ವಿಜ್ಞಾನ ಮತ್ತು ತಂತ್ರಜ್ಞಾನ ಎಲ್ಲ ಸಮಸ್ಯೆಗಳಿಗೆ ಪರಿಹಾರವೆಂದು ಸರ್ಕಾರ ಯೋಚಿಸುತ್ತದೆ. ಈಗ ಅವು ಎಷ್ಟು ಮಿತಿಮೀರಿ ಉಪಯೋಗಕ್ಕೆ ಬರುತ್ತಿವೆ ಎಂದರೆ, ನಾವು ಯಾವುದನ್ನು ಅಭಿವೃದ್ಧಿ ಎಂದುಕೊಂಡಿದ್ದೆವೂ ಅದು ಸಾಕು ಎಂಬ ಚಳುವಳಿ ಬೇಕೆಂದೆನಿಸುತ್ತದೆ. ಇಂತಹ ಪರಿಸ್ಥಿತಿ ತಪ್ಪಬೇಕಾದರೆ ಖಾದಿ ಮತ್ತು ಗ್ರಾಮೋದ್ಯೋಗಗಳನ್ನು ಪ್ರೋತ್ಸಾಹಿಸುವುದನ್ನು ಆದ್ಯತೆಯ ಮೇರೆಗೆ ಸರ್ಕಾರ ಅಲೋಚಿಸಬೇಕು. ಹನ್ನೆರಡನೇ ಪಂಚವಾರ್ಷಿಕ ಯೋಜನೆಯನ್ನು ಈ ಬೆಳಕಿನಲ್ಲಿ ಪುನರ್ ರಚಿಸಬೇಕು. ಆದರೆ ಪ್ರಧಾನಿಮಂತ್ರಿಯವರ ನೀತಿಗಳು ಇದಕ್ಕೆ ವಿರೋಧವಾದ ರೀತಿಯಲ್ಲಿವೆ. ಅವರು ಯಂತ್ರಗಳಿಂದ ಅಗ್ಗದ ದರದಲ್ಲಿ ಪದಾರ್ಥಗಳನ್ನು ತಯಾರಿಸುವ ವಿದೇಶಿ ಕಂಪನಿಗಳಿಗೆ ಮುಕ್ತ ದ್ವಾರ ಮಾಡಿದ್ದಾರೆ. ಅದರಿಂದಾಗಿ ಕೈಮಗ್ಗದ ಕೈಗಾರಿಕೆಯಲ್ಲಿ, ಎಣ್ಣೆ ಕೈಗಾರಿಕೆಯಲ್ಲಿ ತೊಡಗಿರುವ ಸಾಮಾನ್ಯ ಜನರ ಬದುಕಿನ ದಾರಿಯನ್ನು ಕಿತ್ತುಕೊಳ್ಳುತ್ತಿದೆ. ಖಾದಿ ಮತ್ತು ಗ್ರಾಮೋದ್ಯೋಗದಲ್ಲಿ ತೊಡಗಿರುವವರಿಗೆ ಪ್ರಧಾನಿಯವರ ದೃಷ್ಟಯಲ್ಲಿ ಆತ್ಮಗೌರವ ಇಲ್ಲದಂಥವರಾಗಿದ್ದಾರೆ. ಜನರಿಗೆ ಆಹಾರ, ಬಟ್ಟೆ ಮತ್ತು ವಸತಿಯನ್ನು ಕಲ್ಪಿಸುವುದಷ್ಟಕ್ಕೇ ನೀತಿ ಸೀಮಿತವಾಗಿದೆ. ತನ್ಮೂಲಕ ಬಡವರ ವಿರೋಧಿ ಆರ್ಥಿಕ ನೀತಿಯನ್ನು ಜನರ ದೃಷ್ಟಿಯಿಂದ ಕಣ್ಮರೆ ಮಾಡುವುದಕ್ಕಾಗಿ ತಮ್ಮ ಸರ್ಕಾರ ಜನರ ಪರವಾಗಿದೆ ಎಂದು ತೋರಿಸುವ ಪ್ರಯತ್ನ ಮಾಡುತ್ತಿದ್ದಾರೆ. ಆದ್ದರಿಂದ ಜನಸಾಮಾನ್ಯ ಭಾರತೀಯರಿಗೆ ಈ ೨೧ನೇ ಶತಮಾನ ತಮ್ಮದಲ್ಲವೆಂದೆನಿಸುತ್ತಿದೆ. ತಮ್ಮ ದೇಶದಲ್ಲಿಯೇ ಅವರು ಅನಾಥಪ್ರಜ್ಞೆಯನ್ನು ಅನುಭವಿಸುತ್ತಿದ್ದಾರೆ. ಈ ಸಂಕಷ್ಟದಿಂದ ಪಾರಾಗಲು ಏಕೈಕ ಮಾರ್ಗವೆಂದರೆ ಖಾದಿ ಮತ್ತು ಗ್ರಾಮೋದ್ಯೋಗಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡುವುದೇ ಆಗಿದೆ.

* * *

‘ಜಾಗತೀಕರಣ’ ‘ಉದಾರೀಕರಣ’ ‘ಖಾಸಗೀಕರಣ’ ಭ್ರಷ್ಟಾಚಾರದ ವೇಗವರ್ಧಕ ತ್ರಿಕರಣಗಳು

– *ಪ್ರೊ. ಬಿ.ಎಂ.ಕುಮಾರಸ್ವಾಮಿ*

೧೯೯೧ರಲ್ಲಿ ಅಧಿಕಾರಕ್ಕೆ ಬಂದ ಪಿ.ವಿ.ನರಸಿಂಹರಾವ್ ನೇತೃತ್ವದ ಕಾಂಗ್ರೆಸ್ ಸರ್ಕಾರ, ಅಮೆರಿಕ ಹಾಗೂ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳಾದ ಐ.ಎಂ. ಎಫ್. ಹಾಗೂ ವಿಶ್ವಬ್ಯಾಂಕಿನ ಒತ್ತಡಕ್ಕೆ ಮಣಿದು, ಎಲ್.ಪಿ.ಜಿ. (ಉದಾರೀಕರಣ, ಖಾಸಗೀಕರಣ ಹಾಗೂ ಜಾಗತೀಕರಣ) ನೀತಿಯನ್ನು ಜಾರಿಗೆ ತಂದಿತು. ಇದನ್ನು ‘ಜಾಗತೀಕರಣ ನೀತಿ’ ಅಥವಾ ‘ಮುಕ್ತ ಮಾರುಕಟ್ಟೆ ನೀತಿ’ ಅಥವಾ ‘ಬಂಡವಾಳಶಾಹಿ ನೀತಿ’ ಎಂದೂ ಕರೆಯಬಹುದು. ಆಗ ಇದನ್ನು ‘ಹೊಸ ಆರ್ಥಿಕ ನೀತಿ’ ಎಂದೂ ಕರೆಯಲಾಯಿತು. ೧೯೪೭ರಿಂದ ೧೯೯೧ರ ವರೆಗೆ ಸುಮಾರು ೪೪ ವರ್ಷಗಳ ಕಾಲ ಭಾರತ ಸರ್ಕಾರ ಅನುಸರಿಸಿದ ಸಮಾಜವಾದಿ ಆರ್ಥಿಕ ನೀತಿಗೆ ಇದು ತದ್ವಿರುದ್ಧವಾಗಿತ್ತು. ಸಂಸತ್ತಿನಲ್ಲಿ ಆಗಲಿ ಅಥವಾ ಸಾರ್ವಜನಿಕವಾಗಿ ಆಗಲಿ ಯವುದೇ ಚರ್ಚೆಗೆ ಒಳಪಡದೆ, ಪಾಶ್ಚಿಮಾತ್ಯ ರಾಷ್ಟ್ರಗಳು ಹಾಗೂ ಅವುಗಳ ಹಣಕಾಸು ಸಂಸ್ಥೆಗಳ ಅಣತಿಗೆ ತಲೆಬಾಗಿ ಕೇಂದ್ರ ಸರ್ಕಾರವು ದೇಶದ ಮೇಲೆ ಏಕಾಏಕಿ ಹೇರಿದ ನೀತಿ ಇದಾಗಿತ್ತು. ಪಾಶ್ಚಿಮಾತ್ಯ ಬಂಡವಾಳಶಾಹಿ ವ್ಯವಸ್ಥೆಗೆ ಭಾರತದ ಆರ್ಥಿಕ ನೀತಿಯನ್ನು ಪರಿವರ್ತಿಸುವ ಹೊಣೆಗಾರಿಕೆ ಬಂದದ್ದು ಡಾ.ಮನಮೋಹನ್‌ಸಿಂಗ್‌ರ ಹೆಗಲಿಗೆ. ಅಲ್ಲಿಯವರೆಗೆ ಅವರು ಐ.ಎಂ.ಎಫ್. ಹಾಗೂ ವರ್ಲ್ಡ್‌ಬ್ಯಾಂಕಿನ ಗರಡಿಯಲ್ಲಿ ಸಾಕಷ್ಟು ತರಬೇತಿಯನ್ನು ಪಡೆದಿದ್ದರು. ಈ ಹಿನ್ನೆಲೆಯ ಅರ್ಥವೆಂದರೆ, ಜಾಗತೀಕರಣ ನೀತಿಯು, ಭಾರತವು ಭಾರತೀಯರಿಗಾಗಿ ಸಿದ್ಧಗೊಳಿಸಿ ಜಾರಿಗೆ ತಂದ ಆರ್ಥಿಕ ನೀತಿಯಾಗಿರಲಿಲ್ಲ. ಬದಲಾಗಿ ಪಾಶ್ಚಿಮಾತ್ಯ ರಾಷ್ಟ್ರಗಳು – ತಮ್ಮ ಹಾಗೂ ತಮ್ಮ ಬಹುರಾಷ್ಟ್ರೀಯ ಕಂಪನಿಗಳ ಲಾಭಕ್ಕಾಗಿ ಭಾರತದ ಮೇಲೆ ಹೇರಿದ ಆರ್ಥಿಕ ನೀತಿಯಾಗಿತ್ತು.

ಭಾರತದಲ್ಲಿ, ಭ್ರಷ್ಟಾಚಾರದ ಸಸಿಯನ್ನು ನೆಟ್ಟು ಪೋಷಿಸಿದ ಅಪಕೀರ್ತಿ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರಿಗೆ ಸಲ್ಲುತ್ತದೆ. ಆದರೆ ಭ್ರಷ್ಟಾಚಾರದ ಬೆಳೆ ಹುಲುಸಾಗಿ ಬರಲು ಶುರುವಾದದ್ದು ೧೯೯೧ರ ಜಾಗತೀಕರಣದ ನಂತರವೇ. ಜಾಗತೀಕರಣ ನೀತಿಯ ಪ್ರಾರಂಭದ ದಿನಗಳಲ್ಲೇ ಹರ್ಷದ್ ಮೆಹ್ತಾ ಎಂಬ ಷೇರುಪೇಟೆ ಗೂಳಿಯು ನಡೆಸಿದ ಭಾರೀ ಭ್ರಷ್ಟಾಚಾರವು ರಾಷ್ಟ್ರದಲ್ಲಿ ಸಂಚಲನ ಮೂಡಿಸಿತ್ತು. ಆಗಿನ ಹಣಕಾಸು ಸಚಿವ ಡಾ.ಮನಮೋಹನ್‌ಸಿಂಗ್ ‘ಷೇರುಪೇಟೆ ಹಗರಣದಿಂದಾಗಿ ಒಂದು ಕ್ಷಣವೂ ನಿದ್ರೆ ಕಳೆದುಕೊಳ್ಳಲಿಲ್ಲ’ ಎಂದು ಸಂಸತ್ತಿನಲ್ಲಿ ಹೇಳಿಕೆ ನೀಡಿದರು. ಭ್ರಷ್ಟಾಚಾರವನ್ನು ಸಹಿಸಿಕೊಳ್ಳುವ ಅಪಾರ ಸಾಮರ್ಥ್ಯ ತಮಗೆ ಇದೆ ಎಂಬ

ಸೂಚನೆಯನ್ನು ಮನಮೋಹನ್‌ಸಿಂಗ್ ರಾಷ್ಟ್ರಕ್ಕೆ ಆಗಲೇ ರವಾನಿಸಿದ್ದರು. ಅದರ ಪೂರ್ಣಫಲವನ್ನು ಇಂದು ನಾವು ಕಾಣುತ್ತಿದ್ದೇವೆ. ಜಾಗತೀಕರಣದ ೨೦ ವರ್ಷಗಳನ್ನು ನಾವು ಈಗ ಕಳೆದಿದ್ದೇವೆ (೧೯೯೧-೨೦೧೧. ಇಷ್ಟು ಸಣ್ಣ ಕಾಲವಧಿಯಲ್ಲಿ ಭಾರತವು ಜಗತ್ತಿನ ಅತ್ಯಂತ ಭ್ರಷ್ಟ ದೇಶಗಳಲ್ಲೊಂದು ಎಂಬ ಕುಖ್ಯಾತಿಗೆ ಪಾತ್ರವಾಗಿದೆ. ಕೇಂದ್ರ ಸರ್ಕಾರದಿಂದ ಹಿಡಿದು ಗ್ರಾಮಪಂಚಾಯತಿಯವರೆಗೆ ಇಡೀ ಸರ್ಕಾರೀ ವ್ಯವಸ್ಥೆ ಭ್ರಷ್ಟಾಚಾರದಿಂದ ಕೊಳೆತು ನಾರುತ್ತಿದೆ. ಇದಕ್ಕೆ ಪೂರಕವಾಗಿ ರಾಷ್ಟ್ರೀಯ ಹಾಗೂ ಬಹುರಾಷ್ಟ್ರೀಯ ಖಾಸಗಿ ಉದ್ದಿಮೆದಾರರು, ತಮ್ಮ ಹಣದ ಸೂಟ್‌ಕೇಸುಗಳ ಮೂಲಕ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಹಾಗೂ ಎಲೆಕ್ಟ್ರಾನಿಕ್ ಹಾಗೂ ಮುದ್ರಣ ಮಾಧ್ಯಮ - ಹೀಗೆ ಇಡೀ ವ್ಯವಸ್ಥೆಯನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಕುಣಿಸುತ್ತಿದ್ದಾರೆ. ಶಿಕ್ಷಣ ಹಾಗೂ ಆರೋಗ್ಯ ವ್ಯವಸ್ಥೆಗಳು, ಪೋಲಿಸ್ ಮತ್ತು ಸೈನಿಕ ವ್ಯವಸ್ಥೆಗಳೂ ಸಹಾ ಭ್ರಷ್ಟಾಚಾರದ ಕೂಪದಲ್ಲಿ ಮುಳುಗಿವೆ. ಎಲ್ಲ ರಾಜಕೀಯ ಪಕ್ಷಗಳೂ ಭ್ರಷ್ಟವಾಗಿ ಹೋಗಿವೆ.

'ನ್ಯಾಷನಲ್ ಎಲೆಕ್ಷನ್ ವಾಚ್' ಎಂಬ ಸಂಸ್ಥೆಯ ವರದಿ ಪ್ರಕಾರ ೨೦೦೯ರಲ್ಲಿ ಅಸ್ತಿತ್ವಕ್ಕೆ ಬಂದ ಈಗಿನ ೧೫ನೇ ಲೋಕಸಭೆಯ ೫೪೩ ಸದಸಯರ ಪೈಕಿ, ಅವರೇ ಘೋಷಣೆ ಮಾಡಿಕೊಂಡಂತೆ ೩೦೬ ಸದಸ್ಯರು ಕೋಟ್ಯಧಿಪತಿಗಳಾಗಿದ್ದಾರೆ. ೧೪ನೇ ಲೋಕಸಭೆಯಲ್ಲಿ (೨೦೦೪-೦೯) ಅಂಥವರ ಸಂಖ್ಯೆ ೧೫೪ ಆಗಿತ್ತು. ಅಂದರೆ ಐದೇ ವರ್ಷಗಳ ಅವಧಿಯಲ್ಲಿ ಕೋಟ್ಯಧಿಪತಿ ಸದಸ್ಯರ ಸಂಖ್ಯೆ ಎರಡು ಪಟ್ಟು ಹೆಚ್ಚಾಗಿದೆ.

ಈ ೫೪೩ ಎಂ.ಪಿ.ಗಳ ಒಟ್ಟು ಘೋಷಿತ ಆಸ್ತಿ ೨೮೦೦ ಕೋಟಿ ರೂ. ಗಳು. ಅಂದರೆ ಒಬ್ಬ ಎಂ.ಪಿ.ಯ ಸರಾಸರಿ ಆಸ್ತಿ ಐದು ಕೋಟಿ ಹದಿನೈದು ಲಕ್ಷ ರೂ. ಈ ೩೦೬ ಕೋಟ್ಯಧಿಪತಿ ಎಂ.ಪಿ.ಗಳ ಹಂಚಿಕೆ ಪ್ರಮುಖ ರಾಜಕೀಯ ಪಕ್ಷಗಳಲ್ಲಿ ಈ ರೀತಿ ಇದೆ:

ಕಾಂಗ್ರೆಸ್	- ೧೪೧	- ೪೬%
ಬಿ.ಜೆ.ಪಿ	- ೫೮	- ೧೯%
ಸಮಾಜವಾದಿ ಪಕ್ಷ	- ೧೪	
ಬಹುಜನ ಸ.ಪ	- ೧೩	
ಡಿ.ಎಂ.ಕೆ	- ೧೨	
ಶಿವಸೇನೆ	- ೯	
ನ್ಯಾಷನಲಿಸ್ಟ್ ಕಾಂಗ್ರೆಸ್	- ೭	

ಕೋಟ್ಯಧಿಪತಿ ಎಂ.ಪಿ.ಗಳಲ್ಲಿ ಸಿಂಹಪಾಲು - ೪೬% ಜನಸಾಮಾನ್ಯನ ಪಕ್ಷವಾದ ಕಾಂಗ್ರೆಸ್‌ನದು. ಬಿ.ಜೆ.ಪಿ.ಯ ಪಾಲು ೧೯%. ಅಂದರೆ ಈ ಎರಡೇ ಪಕ್ಷಗಳ ಒಟ್ಟು ಪಾಲು ೬೫%.

ಶೇ.೭೫ರಷ್ಟು ಕೇಂದ್ರಮಂತ್ರಿಗಳು ಕೋಟ್ಯಧಿಪತಿಗಳಾಗಿದ್ದಾರೆ. ೬೪ ಕೇಂದ್ರ ಕ್ಯಾಬಿನೆಟ್ ಸಚಿವರ ಒಟ್ಟು ಘೋಷಿತ ಸಂಪತ್ತು ೫೦೦ ಕೋಟಿ ರೂ.

ಒಬ್ಬ ಅಭ್ಯರ್ಥಿಯ ಘೋಷಿತ ಸಂಪತ್ತು ಹೆಚ್ಚಾದಷ್ಟೂ ಸಂಸತ್ತಿಗೆ ಅವನು ಆಯ್ಕೆಯಾಗುವ ಸಾಧ್ಯತೆ ಹೆಚ್ಚಾಗುತ್ತದೆ. ಇದನ್ನು ನ್ಯಾಷನಲ್ ಎಲೆಕ್ಷನ್ ವಾಚ್‌ನ

ವರದಿ ಪುಷ್ಟೀಕರಿಸುತ್ತದೆ.

೨೦೦೯ರ ಲೋಕಸಭೆ ಚುನಾವಣೆಗೆ ನಿಂತ ಅಭ್ಯರ್ಥಿಗಳಲ್ಲಿ ೩೪೩೭ ಅಭ್ಯರ್ಥಿಗಳು ತಲಾ ಹತ್ತು ಲಕ್ಷ ರೂ.ಗಿಂತ ಕಡಿಮೆ ಆಸ್ತಿ ಘೋಷಿಸಿದ್ದರು. ಅವರ ಪೈಕಿ ಕೇವಲ ೧೫ಜನ ಆಯ್ಕೆಯಾದರು (೦.೫೪%). ೧೭೮೫ ಅಭ್ಯರ್ಥಿಗಳು ಹತ್ತು ಲಕ್ಷದಿಂದ ಐವತ್ತು ಲಕ್ಷದವರೆಗೆ ಆಸ್ತಿ ಘೋಷಿಸಿದ್ದರು. ಅವರಲ್ಲಿ ೧೧೬ ಜನ ಗೆದ್ದರು (೬%).

೫೦ ಲಕ್ಷದಿಂದ ೫ ಕೋಟಿ ರೂ. ವರೆಗೆ ಆಸ್ತಿ ಘೋಷಿಸಿದ ಅಭ್ಯರ್ಥಿಗಳಲ್ಲಿ ಶೇ.೧೯ ಅಭ್ಯರ್ಥಿಗಳು ಗೆದ್ದರು.

ಗರಿಷ್ಠ ಆಸ್ತಿ ಎಂದರೆ ಐದು ಕೋಟಿ ರೂ.ಗಿಂತ ಹೆಚ್ಚು ಆಸ್ತಿ ಘೋಷಿಸಿದ ೩೨೨ ಅಭ್ಯರ್ಥಿಗಳ ಪೈಕಿ ೧೦೬ ಜನ ಗೆದ್ದರು (೩೩%).

೧೦ ಲಕ್ಷ ರೂ.ಗಿಂತ ಕಡಿಮೆ ಅಸ್ತಿ ಘೋಸಿಸುವವರು ಸಂಸತ್ತಿಗೆ ಆಯ್ಕೆಯಾಗುವ ಸಾಧ್ಯತೆ ತೀರಾ ಕಡಿಮೆ ಎಂಬುದು ಇದರಿಂದ ಸಾಬೀತಾಗುತ್ತದೆ. ಈ ಗೆಲುವಿನ ಆಸ್ತಿ ಮಿತಿ ಚುನಾವಣೆಯಿಂದ ಚುನಾವಣೆಗೆ ಏರುತ್ತಾ ಹೋಗುತ್ತದೆ. ಅಂದರೆ ನೀವು ಘೋಷಿಸುವ ಆಸ್ತಿ ಹೆಚ್ಚಾದಷ್ಟೂ ಲೋಕಸಭೆಗೆ ನೀವು ಆಯ್ಕೆಯಾಗುವ ಸಾಧ್ಯತೆಗಳು ಹೆಚ್ಚಾಗುತ್ತವೆ ಎಂಬುದನ್ನು ಇದು ಸಾಬೀತು ಮಾಡುತ್ತದೆ. ಆದ್ದರಿಂದ, ಆಯ್ಕೆಯಾದವರು ಏಕಕೇನಪ್ರಕಾರೇಣ ಹಣ ಮಾಡಲೇಬೇಕಾದ ಪರಿಸ್ಥಿತಿ ಬಂದಿದೆ. ರಾಜ್ಯಗಳ ವಿಧಾನಸಭೆಗಳ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗೇನೂ ಇಲ್ಲ. ಲೋಕಸಭೆಯ ಕೋಟ್ಯಧಿಪತಿಗಳ ಹಿಂದೆ ಭಾರೀ ದೇಶೀಯ ಹಾಗೂ ಬಹುರಾಷ್ಟ್ರೀಯ ಕಂಪನಿಗಳ ಉದ್ಯೋಗಪತಿಗಳು ಇದ್ದಾರೆ ಎಂಬುದನ್ನು ಒತ್ತಿ ಹೇಳಬೇಕಾಗಿಲ್ಲ. ಹೀಗಾಗಿ ನಮ್ಮ ಕೇಂದ್ರ ಸರ್ಕಾರಕ್ಕೆ ಸಾಮಾನ್ಯ ನಾಗರಿಕರ ಯೋಗಕ್ಷೇಮಕ್ಕಿಂತ, ಉದ್ಯೋಗಪತಿಗಳ ಅಭಿವೃದ್ಧಿಯ ಕಾಳಜಿಯೇ ಹೆಚ್ಚಾಗಿರುತ್ತದೆ. ದೇಶದ ಅಮೂಲ್ಯ ಸಂಪನ್ಮೂಲವನ್ನು ಬಿಸಾಕುವ ಬೆಲೆಗೆ ಉದ್ಯೋಗಪತಿಗಳಿಗೆ ನೀಡುವ ಕೇಂದ್ರ ಸರ್ಕಾರದ ನೀತಿಯ ಹಿಂದೆ ಈ ಶಕ್ತಿಯೇ ಕೆಲಸ ಮಾಡುತ್ತದೆ. ಕಲ್ಲಿದ್ದಲು ಹಗರಣ, ಕಬ್ಬಿಣದ ಗಣಿಗಾರಿಕೆ ಹಗರಣ, ೨ಜಿ ತರಂಗಾಂತರ ಹಗರಣ – ಇವುಗಳೆಲ್ಲ ಈ ದುಷ್ಟಕೂಟದ ಫಲಗಳು.

ಕೇಂದ್ರ ಸರ್ಕಾರದ ಬಜೆಟ್‌ಗಳು ಖಾಸಗಿ ಉದ್ಯೋಗಪತಿಗಳ ಸೌಲಭ್ಯಕ್ಕಾಗಿಯೇ ಸಿದ್ಧಗೊಳ್ಳುತ್ತವೆ. ಕಳೆದ ೬ ಕೇಂದ್ರ ಬಜೆಟ್‌ಗಳಲ್ಲಿ ಖಾಸಗಿ ಉದ್ದಿಮೆದಾರರ ಲಾಭಕ್ಕಾಗಿ ಕಂಪನಿ ಆದಾಯ ತೆರಿಗೆ, ಕಸ್ಟಮ್ಸ್ ಹಾಗೂ ಎಕ್ಸೈಸ್ ಸುಂಕಗಳಲ್ಲಿ ೨೧ ಲಕ್ಷ ಕೋಟಿ ರೂ. ರಿಯಾಯಿತಿಗಳನ್ನು ನೀಡಲಾಗಿದೆ. ಇದೇ ಅವಧಿಯಲ್ಲಿ ಎರಡು ಲಕ್ಷಕ್ಕೂ ಹೆಚ್ಚು ರೈತರು ದೇಶದಾದ್ಯಂತ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಅರ್ಜುನ್ ಸೇನ್ ಗುಪ್ತಾ ವರದಿ (೨೦೦೭) ಪ್ರಕಾರ ಶೇ.೭೮ರಷ್ಟು ಭಾರತದ ಪ್ರಜೆಗಳ ಆದಾಯ ದಿನಕ್ಕೆ ೨೦ ರೂ.ಗಳಿಗಿಂತ ಕಡಿಮೆ. ಅಂದರೆ ೭೮% ಭಾರತೀಯರು ಬಡತನದ ರೇಖೆಯ ಕೆಳಗಿದ್ದಾರೆ.

ಭಾರತದ ಸಂಸತ್ತು ಇಡೀ ದೇಶದ ಶಕ್ತಿಕೇಂದ್ರ, ಶಾಸಕಾಂಗ (ಸಂಸತ್ತು) ಹಾಗೂ ಕಾರ್ಯಾಂಗ (ಕೇಂದ್ರ ಸರ್ಕಾರ) ಎರಡೂ ರಚನೆಯಾಗುವುದು ಸಂಸತ್ ಸದಸ್ಯರಿಂದಲೇ. ದೇಶದ ಎಲ್ಲ ಶಾಸನಗಳು ಹಾಗೂ ನೀತಿಗಳು ರಚನೆಯಾಗುವುದೂ

ಅಲ್ಲೇ. ಸಂಸತ್ತು ನಮ್ಮ ದೇಶದ ಶಕ್ತಿಗಂಗೋತ್ರಿ. ಅಂಥ ಸಂಸತ್ತೇ ಭ್ರಷ್ಟರಿಂದ ತುಂಬಿ ಭ್ರಷ್ಟಾಚಾರದ ಕೂಪವಾದಾಗ, ಭ್ರಷ್ಟಾಚಾರದ ನಿಯಂತ್ರಣ ದುಸ್ತರ. ಇಂದು ಭಾರತದ ಸಂಸತ್ತು ಭ್ರಷ್ಟಾಚಾರದ ಗಂಗೋತ್ರಿಯಾಗಿದೆ.

ಕಪ್ಪುಹಣ ಎಂಬುದು ತೆರಿಗೆ ಕದ್ದ ಹಣಕ್ಕೆ ಸಾಮಾನ್ಯವಾಗಿ ಅನ್ವಯವಾದರೂ ಇಂದು ಅದು ಕೇವಲ ತೆರಿಗೆಗಳ್ಳತನಕ್ಕೆ ಸೀಮಿತವಾಗಿಲ್ಲ. ನಾನಾ ವಿಧದ ಸರ್ಕಾರಿ ಹಾಗೂ ಖಾಸಗಿ ಭ್ರಷ್ಟಾಚಾರ, ಮೋಸ, ಭಯೋತ್ಪಾದನೆ, ಮಾದಕ ವಸ್ತುಗಳ ಕಳ್ಳಸಾಗಾಣಿಕೆ, ಸ್ಮಗ್ಲಿಂಗ್ ಮುಂತಾದ ಅಪರಾಧಿ ಚಟುವಟಿಕೆಗಳ ಮೂಲಕ ಗಳಿಸಿದ ಹಣವನ್ನು ಅದು ಒಳಗೊಳ್ಳುತ್ತದೆ. ಆದ್ದರಿಂದ ಅದನ್ನು 'ಕೆಂಪುಹಣ' ಎಂದು ಕರೆಯುವುದು ಹೆಚ್ಚು ಸೂಕ್ತ.

೧೯೭೫-೭೬ರಲ್ಲಿ ಕಪ್ಪುಹಣದ ಪ್ರಮಾಣ ರಾಷ್ಟ್ರೀಯ ಆದಾಯದ ಶೇ.೧೦ಕ್ಕಿಂತ ಕಡಿಮೆ ಇತ್ತು. ೧೯೮೩-೮೪ರ ಹೊತ್ತಿಗೆ ಅದು ರಾಷ್ಟ್ರೀಯ ಆದಾಯದ ಶೇ.೧೮ ರಿಂದ ೨೧ರ ಮಟ್ಟಕ್ಕೆ ಏರಿತು. ೧೯೮೭-೮೮ರ ಹೊತ್ತಿಗೆ ಅದು ರಾಷ್ಟ್ರೀಯ ಆದಾಯದ ಶೇ. ೫೧ರಷ್ಟಿದೆ ಎಂದು ಅಂದಾಜು ಮಾಡಲಾಯಿತು. ಅಂದರೆ ೧೯೮೭-೮೮ರ ಹೊತ್ತಿಗೆ ಅಕ್ರಮ ಆರ್ಥಿಕತೆ ಅಥವಾ ಅಕ್ರಮ ಆರ್ಥಿಕತೆಗೆ ಸಮಾನಾಂತರ ಆರ್ಥಿಕತೆ (ಪ್ಯಾರಲಲ್ ಎಕಾನಮಿ) ಎಂಬ ಹೆಸರು ನೀಡಲಾಯಿತು. ೧೯೮೮ರ ನಂತರದಲ್ಲಿ ಕಪ್ಪುಹಣದ ಯಾವುದೇ ಅಧಿಕೃತ ಅಂದಾಜು ಬಂದಿಲ್ಲ. ಆದರೆ ಇಂದು ಅದು ರಾಷ್ಟ್ರೀಯ ಆದಾಯದ ಶೇ.೬೦ಕ್ಕಿಂತ ಕಡಿಮೆ ಇಲ್ಲ ಎಂದು ಧಾರಾಳವಾಗಿ ಹೇಳಬಹುದು. ಅಂದರೆ ಇದು ಭಾರತದಲ್ಲಿ ಅಕ್ರಮ ಆರ್ಥಿಕತೆಯೇ ಪ್ರಧಾನ ಆರ್ಥಿಕತೆಯಾಗಿದೆ; ಸಕ್ರಮ ಆರ್ಥಿಕತೆ ಅಧೀನ ಆರ್ಥಿಕತೆಯಾಗಿದೆ.

ಜಗತ್ತಿನ ಹಲವಾರು ತೆರಿಗೆಗಳ್ಳರ ತಾಣಗಳಲ್ಲಿ ಅತ್ಯಂತ ಪ್ರಮುಖವಾದುದು ಸ್ವಿಟ್ಜರ್ಲೆಂಡ್. ಸ್ವಿಸ್ ಬ್ಯಾಂಕಿಂಗ್ ಅಸೋಸಿಯೇಷನ್‌ನವರು ೨೦೦೬ರಲ್ಲಿ ಹೊರಡಿಸಿದ ಪ್ರಕಟಣೆಯ ಪ್ರಕಾರ ಸ್ವಿಸ್ ಬ್ಯಾಂಕುಗಳಲ್ಲಿ ಕಳ್ಳ ಹಣ ಇಟ್ಟಿರುವ ೫ ಅತ್ಯಂತ ದೊಡ್ಡ ದೇಶಗಳೆಂದರೆ,

೧. ಭಾರತ – ೧೪೫೬ ಶತಕೋಟಿ ಅಮೇರಿಕನ್ ಡಾಲರ್
೨. ರಷ್ಯಾ – ೪೭೦ ಶತಕೋಟಿ ಅಮೇರಿಕನ್ ಡಾಲರ್
೩. ಯು.ಕೆ. – ೩೯೦ ಶತಕೋಟಿ ಅಮೇರಿಕನ್ ಡಾಲರ್
೪. ಉಕ್ರೇನ್ – ೧೦೦ ಶತಕೋಟಿ ಅಮೇರಿಕನ್ ಡಾಲರ್
೫. ಚೈನಾ – ೯೬ ಶತಕೋಟಿ ಅಮೇರಿಕನ್ ಡಾಲರ್

ಭಾರತ ಬಿಟ್ಟು ಉಳಿದ ೪ ದೇಶಗಳು ಸ್ವಿಸ್ ಬ್ಯಾಂಕುಗಳಲ್ಲಿಟ್ಟಿರುವ ಒಟ್ಟು ಕಪ್ಪು ಹಣ ೧೦೫೬ ಶತಕೋಟಿ ಅಮೇರಿಕನ್ ಡಾಲರ್. ಭಾರತ ದೇಶವೊಂದೇ ೧೪೫೬ ಶತಕೋಟಿ ಅಮೇರಿಕನ್ ಡಾಲರ್‌ಗಳನ್ನು ಇಟ್ಟಿದೆ. ಅಂದರೆ ಆ ವರದಿಯ ಪ್ರಕಾರ ೨೦೦೬ರಲ್ಲಿ ಸ್ವಿಸ್ ಬ್ಯಾಂಕುಗಳಲ್ಲಿ ಕಳ್ಳ ಹಣವಿಟ್ಟಿದ್ದ ದೇಶಗಳಲ್ಲಿ ಭಾರತಕ್ಕೇ ಅಗ್ರಸ್ಥಾನ.

'ಗ್ಲೋಬಲ್ ಫೈನಾನ್ಷಿಯಲ್ ಇಂಟಗ್ರಿಟಿ' ಎಂಬುದು ಜಾಗತಿಕವಾಗಿ ಕಪ್ಪುಹಣದ ಹರಿವನ್ನು ಪತ್ತೆಹಚ್ಚುವ ಅಮೆರಿಕದ ಒಂದು ಸ್ವಯಂ ಸೇವಾ ಸಂಸ್ಥೆ.

ರೇಮಂಡ್ ಬೇಕರ್ ಎಂಬುವರು ಅದರ ಮುಖ್ಯಸ್ಥರು. ಈ ಸಂಸ್ಥೆಯ ಸಂಶೋಧನಾ ವರದಿಯ ಪ್ರಕಾರ ೨೦೦೨ ರಿಂದ ೨೦೦೬ರ ವರೆಗಿನ ಐದುವರ್ಷಗಳ ಅವಧಿಯಲ್ಲಿ ಭಾರತದಿಂದ ಹೊರದೇಶಗಳಿಗೆ ಸಾಗಿ ಹೋದ ಕಪ್ಪುಹಣದ ಪ್ರಮಾಣ ವರ್ಷಕ್ಕೆ ೨೭.೩ ಶತಕೋಟಿ ಡಾಲರ್. ಅಂದರೆ ಐದು ವರ್ಷಗಳ ಅವಧಿಯಲ್ಲಿ ಭಾರತದಿಂದ ಹೊರ ಸಾಗಿಸಲಾದ ಕಪ್ಪು ಹಣದ ಪ್ರಮಾಣ ೧೩೭.೫ ಶತಕೋಟಿ ಡಾಲರ್ ಅಥವಾ ಇಂದಿನ ಡಾಲರ್-ರುಪಾಯಿ ವಿನಿಮಯ ದರ ($=೫೫ರೂ)ದಂತೆ ರೂ ೭೫೬೨.೫ ಶತಕೋಟಿ (ರೂ.೭೫,೬೨,೫೦೦ ಕೋಟಿ).

೨೦೧೦ರಲ್ಲಿ ಗ್ಲೋಬಲ್ ಫೈನಾನ್ಷಿಯಲ್ ಇಂಟಗ್ರಿಟ್ ಬಿಡುಗಡೆ ಮಾಡಿದ ಎರಡನೇ ವರದಿಯ ಪ್ರಕಾರ ೧೯೪೮ ರಿಂದ ೨೦೦೮ರ ವರೆಗಿನ ಅರವತ್ತು ವರ್ಷಗಳ ಅವಧಿಯಲ್ಲಿ ಹೊರದೇಶಗಳ ತೆರಿಗೆಗಳ್ಳರ ತಾಣಗಳಿಗೆ ಸಾಗಾಟವಾದ ಕಪ್ಪುಹಣದ ಮೊತ್ತ ೪೬೨ ಶತಕೋಟಿ ಡಾಲರ್ ಅಥವಾ ರೂ.೨೫,೪೧,೦೦೦ ಕೋಟಿ. ಅಂದರೆ ವಾರ್ಷಿಕ ಸರಾಸರಿ ರೂ.೪,೨೩,೫೦೦ ಕೋಟಿ ರೂ.ಗಳ ಸಂಪತ್ತನ್ನು ಭಾರತದಿಂದ ಕದ್ದು ಸಾಗಿಸಲಾಗಿದೆ.

ಅರವತ್ತು ವರ್ಷಗಳಲ್ಲಿ ಭಾರತದಿಂದ ಕದ್ದು ಹೊರ ಸಾಗಿಸಲಾದ ಹಣದಲ್ಲಿ ೭೬.೮% ಹಣವನ್ನು ೨೦೦೪-೦೮ರ ಅವಧಿಯಲ್ಲಿ ಸಾಗಿಸಲಾಗಿದೆ ಎಂದು ವರದಿ ತಿಳಿಸುತ್ತದೆ. ಅಂದರೆ ಭಾರತದಿಂದ ಹೊರದೇಶಗಳಿಗೆ ಕದ್ದು ಸಾಗಿಸಿದ ಭಾರೀ ಪ್ರಮಾಣದ ಸಂಪತ್ತಿನಲ್ಲಿ ೭೬.೮% ಭಾಗ ಜಾಗತೀಕರಣದ ನಂತರದಲ್ಲೇ ಸಾಗಾಟವಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

ವರದಿಯು ಹೇಳುವಂತೆ,

"These illicit financial flows were genarally the product of corruption, bribery and kickbaks criminal activities and efforts to shelter wealth from a country's tax authorities."

ಈ ಕಳ್ಳಹಣದ ಸಾಗಾಟಗಳು ಸಾಮಾನ್ಯವಾಗಿ ಭ್ರಷ್ಟಾಚಾರ, ಅಪರಾಧಿ ಚಟುವಟಿಕೆಗಳು ಹಾಗೂ ದೇಶದ ತೆರಿಗೆ ಅಧಿಕಾರಿಗಳಿಂದ ಸಂಪತ್ತನ್ನು ಮುಚ್ಚಿಡುವ ಪ್ರಯತ್ನಗಳ ಫಲವಾಗಿದೆ.

ಈ ಅಪಾರ ಕಳ್ಳತನದ ಸಾಗಾಣಿಕೆಯ ಹಿಂದಿರುವ ಶಕ್ತಿಗಳೆಂದರೆ ಭಾರೀ ಶ್ರೀಮಂತರು (ಹೈ ನೆಟ್‌ವರ್ಕ್ ಇಂಡಿವಿಜುಯಲ್ಸ್) ಮತ್ತು ಖಾಸಗಿ ಕಂಪನಿಗಳು ಎಂದು ವರದಿಯು ತಿಳಿಸುತ್ತದೆ.

ಕಪ್ಪುಹಣದ ಒಂದು ಭಾಗ ವಿದೇಶಗಳ ತೆರಿಗೆಗಳ್ಳರ ತಾಣ (ಟ್ಯಾಕ್ಸ್ ಹ್ಯಾವನ್ಸ್) ಗಳಲ್ಲಿ ಶೇಖರಣೆಯಾಗುತ್ತದೆ. ಉಳಿದ ಭಾಗ ದೇಶದಲ್ಲೇ ಚಲಾವಣೆಯಾಗುತ್ತದೆ. ಅಮೆರಿಕದ ಕಪ್ಪುಹಣದ ಸಂಶೋಧನಾ ಸಂಸ್ಥೆ - ಗ್ಲೋಬಲ್ ಫೈನಾನ್ಷಿಯಲ್ ಇಂಟಗ್ರಿಟಿಯ ೨೦೧೦ರ ವರದಿಯ ಪ್ರಕಾರ ಭರತದ ಒಟ್ಟು ಕಪ್ಪುಹಣದಲ್ಲಿ ೭೨% ಭಾಗ ಸ್ವಿಟ್ಜರ್ಲೆಂಡ್ ಮುಂತಾದ ವಿದೇಶಿ ತೆರಿಗೆಗಳ್ಳರ ತಾಣಗಳ ಕಳ್ಳಬ್ಯಾಂಕುಗಳಲ್ಲಿ ಶೇಖರವಾಗುತ್ತದೆ. ಭಾರತದ ಸಿ.ಬಿ.ಐ.ನ ನಿರ್ದೇಶಕರಾದ ಎ.ಪಿ.ಸಿಂಗ್, ೨೦೧೨ರ ಫೆಬ್ರವರಿಯಲ್ಲಿ ನೀಡಿದ ಹೇಳಿಕೆ ಪ್ರಕಾರ ಭಾರತದಿಂದ ಈ ವರೆಗೆ ಕದ್ದು ಸಾಗಿಸಿ,

ವಿದೇಶಿ ತೆರಿಗೆಗಳ್ಳರ ತಾಣಗಳಲ್ಲಿ ಸಂಗ್ರಹಿಸಲಾಗಿರುವ ಹಣ ೫೦೦ ಶತಕೋಟಿ ಡಾಲರ್. ಅಂದಿನ ವಿನಿಮಯ ದರದ ಪ್ರಕಾರ ೨೪.೫ ಲಕ್ಷ ಕೋಟಿ ರೂ.ಗಳು.

ಕೆಲವು ದೇಶಗಳು, ಮುಖ್ಯವಾಗಿ ಸಣ್ಣ ಸಣ್ಣ ದ್ವೀಪ ದೇಶಗಳು ತಮ್ಮನ್ನು ತಾವು ತೆರಿಗೆಗಳ್ಳರ ತಾಣಗಳು ಎಂದು ಘೋಷಿಸಿಕೊಳ್ಳುತ್ತವೆ. ಅಲ್ಲಿ ಆದಾಯತೆರಿಗೆ ದರ ಬಹಳ ಕಡಿಮೆ ಇರುತ್ತದೆ ಅಥವಾ ತೆರಿಗೆಯೇ ಇರುವುದಿಲ್ಲ. ಅಲ್ಲಿನ ಬ್ಯಾಂಕುಗಳು ವಿದೇಶಿ ಪ್ರಜೆಗಳ ಹಣವನ್ನು ಯಾವುದೇ ಪ್ರಶ್ನೆ ಕೇಳದೇ ಠೇವಣಿ ಇಟ್ಟುಕೊಳ್ಳುತ್ತವೆ ಹಾಗೂ ತಮ್ಮ ಗ್ರಾಹಕರ ಹಣಕಾಸು ವ್ಯವಹಾರಗಳನ್ನು ಅತ್ಯಂತ ಗೌಪ್ಯವಾಗಿ ಇರಿಸುತ್ತವೆ. ಅಂಥ ದೇಶಗಳಲ್ಲಿ ಕಂಪನಿಗಳನ್ನು ಸ್ಥಾಪಿಸಿ ನೋಂದಾಯಿಸುವುದು ಬಹಳ ಸರಳ. ಕೇವಲ ಒಂದು ಡಾಲರ್ ಬಂಡವಾಳ ಹಾಗೂ ಇಬ್ಬರು ಸ್ಥಳೀಯರ (ಅವರು ಬಹಳ ಸಲಭವಾಗಿ ಸಿಗುತ್ತಾರೆ!) ಸಹಿಯೊಂದಿಗೆ ಒಂದು ಕಂಪನಿ ನೋಂದಾಯಿಸಬಹುದು. ಒಂದು ಸಾಧಾರಣ ಕಟ್ಟಡ ಸಾವಿರಾರು ಕಂಪನಿಗಳ ನೋಂದಾಯಿತ ಕಛೇರಿಯಾಗುತ್ತದೆ. ಎಲ್ಲವೂ ನಕಲಿ!

ಇಂದು ಪ್ರಪಂಚದಲ್ಲಿ ೭೦ ತೆರಿಗೆಗಳ್ಳರ ತಾಣಗಳಿವೆ. ಅವುಗಳಲ್ಲಿ ೪೦ ಸಕ್ರಿಯವಾಗಿವೆ. ಅವುಗಳಲ್ಲಿ ಪ್ರಮುಖವಾದವು ಸ್ವಿಟ್ಜರ್ಲೆಂಡ್, ಲೀಸ್ಟೆರ್‌ಶ್ಟೈನ್, ಲಕ್ಸಂಬರ್ಗ್, ಛಾನಲ್ ಐಲಾಂಡ್ಸ್, ಬಹಾಮಾಸ್, ಮೊನ್ನಾಕೋ, ಬ್ರಿಟಿಷ್ ವರ್ಜಿನ್ ಐಲ್ಯಾಂಡ್ಸ್, ಸೇಂಟ್‌ಕೀಟ್ಸ್, ಕೇಮನ್ ಐಲ್ಯಾಂಡ್ಸ್, ಮಾರಿಷಿಯಸ್ ಹಾಗೂ ಸಿಂಗಪುರ್.

ವಿದೇಶಗಳ ತೆರಿಗೆಗಳ್ಳರ ತಾಣಗಳಲ್ಲಿ ರಾಶಿ ಹಾಕಿರುವ ಭಾರತದ ಕಳ್ಳಹಣದ ಪರಿಣಾಮವಾಗಿ ಭಾರತ ಸರ್ಕಾರಕ್ಕೆ ಪ್ರತಿ ವರ್ಷ ಸಾವಿರಾರು ಕೋಟಿ.ರೂ.ತೆರಿಗೆ ಆದಾಯದ ನಷ್ಟವಾಗುತ್ತದೆ. ವಿತ್ತೀಯ ಕೊರತೆ ಮಿತಿಮೀರಿ ಹೋಗಿರುವ ಹಾಗೂ ಸಾರ್ವಜನಿಕ ಸಾಲವು ಮಿತಿಮೀರುತ್ತಿರುವ ಈ ಸಂದರ್ಭದಲ್ಲಿ ತೆರಿಗೆಗಳ್ಳರ ತಾಣಗಳಲ್ಲಿ ತುಂಬಿಟ್ಟಿರುವ ಭಾರತದ ಕಳ್ಳಹಣವನ್ನು ಹಿಂದೆ ತರುವುದು ಅತ್ಯಂತ ಅಗತ್ಯವಾಗಿದೆ.

ಸ್ವಿಟ್ಜರ್ಲೆಂಡ್ ಹೊರತುಪಡಿಸಿ ಅಪಾರಪ್ರಮಾಣದ ಕಪ್ಪುಹಣ ಪ್ರತಿವರ್ಷ ಭಾರತದಿಂದ ಇತರ ತೆರಿಗೆಗಳ್ಳರ ತಾಣಗಳಿಗೆ, ನಕಲಿ ಕಂಪನಿಗಳಿಗೆ ಹರಿದುಹೋಗುತ್ತಿದೆ. ಕೇಂದ್ರ ಹಣಕಾಸು ಸಚಿವಾಲಯದ ವೆಬ್‌ಸೈಟ್‌ನ ಪ್ರಕಾರ ಏಪ್ರಿಲ್ ೧೯೯೬ರಿಂದ ೨೦೦೯ರ ಕಾಲಾವಧಿಯಲ್ಲಿ ಈ ಕೆಲಕಂಡ ತೆರಿಗೆಗಳ್ಳರ ತಾಣಗಳಿಗೆ ಕಳಿಸಲಾಗಿರುವ ಹಣದ ವಿವರ ಹೀಗಿದೆ:

ಬ್ರಿಟಿಷ್ ವರ್ಜಿನ್ ಐಲ್ಯಾಂಡ್ಸ್	೧.೬	ಶತಕೋಟಿ ಡಾಲರ್
ಛಾನಲ್ ಐಲ್ಯಾಂಡ್	೫.೪	ಶತಕೋಟಿ ಡಾಲರ್
ಸೈಪ್ರಸ್	೪.೬೭	ಶತಕೋಟಿ ಡಾಲರ್
ಮಾರಿಷಿಯಸ್	೬.೧	ಶತಕೋಟಿ ಡಾಲರ್
ನೆದರ್‌ಲ್ಯಾಂಡ್ಸ್	೧೦.೭	ಶತಕೋಟಿ ಡಾಲರ್
ಸಿಂಗಪುರ್	೧೪.೩೮	ಶತಕೋಟಿ ಡಾಲರ್

ಭಾರತದಿಂದ ಈ ತಾಣಗಳಿಗೆ ಕಳಿಸುವ ಸಾವಿರಾರು ಕೋಟಿ ಡಾಲರ್ ಹಣದಲ್ಲಿ ಬಹುಪಾಲು 'ಪಾರ್ಟಿಸಿಪೇಟರಿ ನೋಟ್ಸ್' ಎಂಬ ವ್ಯವಸ್ಥೆಯ ಮೂಲಕ ವಾಪಸ್ ಬಂದು ಭಾರತದ ಷೇರು ಮಾರುಕಟ್ಟೆಯಲ್ಲಿ ಹೂಡಿಕೆಯಾಗುತ್ತದೆ. ಭಾರತದ

ಷೇರುಪೇಟೆ ನಿಯಂತ್ರಣ ಸಂಸ್ಥೆ 'ಸೆಬಿ'ಯ ಪ್ರಕಾರ ಎಲ್ಲ ವಿದೇಶಿ ಹೂಡಿಕೆ ಸಂಸ್ಥೆಗಳು 'ಗ್ರಾಹಕರನ್ನು ಗುರುತಿಸಿ' (ನೋ ಯುವರ್ ಕಸ್ಟಮರ್ – ಕೆ.ವೈ.ಸಿ) ನಿಬಂಧನೆಯ ಪ್ರಕಾರ, 'ಸೆಬಿ' ಬಳಿ ನೋಂದಾಯಿಸಿಕೊಳ್ಳಬೇಕು. ಆದರೆ ತೆರಿಗೆಗಳ್ಳರ ತಾಣಗಳ ನಕಲಿ ಕಂಪನಿಗಳು ಭಾರತದಲ್ಲಿ ಹೂಡಿಕೆಗಾಗಿ ಬಳಸುವ ಪಿ.ಎನ್.ಗಳ ಮೂಲಕ ಹೂಡಿಕೆದಾರ ಯಾರು, ಅವನ ವಿಳಾಸ, ವ್ಯವಹಾರ ಒಂದೂ ತಿಳಿಯುವುದಿಲ್ಲ. ಈ ಬಗೆಯ ಹೂಡಿಕೆಯ ಮೇಲೆ 'ಸೆಬಿ'ಗೆ ಯಾವ ನಿಯಂತ್ರಣವೂ ಇರುವುದಿಲ್ಲ. ಇದು ದೇಶದ ಭದ್ರತೆಗೆ ಭಾರೀ ಅಪಾಯ ಉಂಟು ಮಾಡಬಹುದು. ಭಯೋತ್ಪಾದಕರು, ಮಾದಕದ್ರವ್ಯಗಳ ಅಂತರರಾಷ್ಟ್ರೀಯ ಕಳ್ಳಸಾಗಾಣಿಕೆದಾರರು ಮುಂತಾದವರು ಪಿ.ಎನ್.ಗಳ ಮೂಲಕ ಕಳ್ಳಹಣವನ್ನು ಭಾರತದ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿ ಅಪಾರ ಲಾಭ ಸಂಪಾದಿಸಿ ಅದನ್ನು ಭಾರತದ ವಿರುದ್ಧವೇ ಬುಡಮೇಲು ಕೃತ್ಯಗಳಿಗೆ ಬಳಸುತ್ತಾರೆ! ಇಂದು ಭಾರತಕ್ಕೆ ಬರುತ್ತಿರುವ ವಿದೇಶಿ ಬಂಡವಾಳದ ಬಹುಪಾಲು ಭಾರತದಿಂದಲೇ ಕದ್ದು ಸಾಗಿಸಿದ ಹಣವಾಗಿದೆ.

ಯು.ಪಿ.ಎ. ಸರ್ಕಾರ ಅಧಿಕಾರಕ್ಕೆ ಬಂದನಂತರ ಭಾರತದ ಷೇರು ಮಾರುಕಟ್ಟೆಯಲ್ಲಿ ಅಪಾಯಕಾರಿ ಪಿ.ಎನ.ಗಳ ಮೂಲಕ ಮಾಡುವ ಹೂಡಿಕೆ ಮೇರೆಮೀರಿದೆ. ೧೯೯೪ ರಿಂದ ೨೦೦೪ರ ವರೆಗೆ ಪಿ.ಎನ್. ಮಾರ್ಗದ ಒಟ್ಟು ಹೂಡಿಕೆ ರೂ ೩೧,೮೭೫ ಕೋಟಿ ಆಗಿತ್ತು. ೧೯೯೪ ರಿಂದ ೨೦೦೭ರ ಅವಧಿಯಲ್ಲಿ ಈ ಮೊತ್ತ ರೂ ೩,೫೩,೪೮೪ ಕೋಟಿಗೆ ಏರಿತು. ಕೇವಲ ೪೦ ತಿಂಗಳ ಅವಧಿಯಲ್ಲಿ ೧೧ ಪಟ್ಟು ಏರಿಕೆ! ೨೦೦೪ರಲ್ಲಿ ವಿದೇಶೀ ಸಾಂಸ್ಥಿಕ ಹೂಡಿಕೆಯಲ್ಲಿ ಪಿ.ಎನ್.ಗಳ ಪಾಲು ೨೦% ಆಗಿತ್ತು. ಆಗಸ್ಟ್ ೨೦೦೭ರಲ್ಲಿ ಇದು ಶೇ.೫೧.೬ಕ್ಕೆ ಏರಿತು. ಅಂದರೆ ೨೦೦೭ರಲ್ಲಿ ಭಾರತದ ಷೇರು ಮಾರುಕಟ್ಟೆಯಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆಯಲ್ಲಿ ಅರ್ಧಕ್ಕಿಂತ ಹೆಚ್ಚು ಹೆಸರಿಲ್ಲದ ಅಪಾಯಕಾರಿ ಪಿ.ಎನ್.ಗಳ ಮೂಲಕ ಬಂದಿತ್ತು. ಅನೇಕ ಪರಿಣತರು ಈ ಪಿ.ಎನ್.ಗಳನ್ನು 'ವೆಪನ್ಸ್ ಆಫ್ ಮಾಸ್ ಡಿಸ್ಟ್ರಕ್ಷನ್' – 'ಸಾಮೂಹಿಕ ಹತ್ಯೆಯ ಅಸ್ತ್ರಗಳು' ಎಂದು ಕರೆಯುತ್ತಾರೆ. ೨೦೦೭ರಲ್ಲಿ 'ಸೆಬಿ'ಯು ಪಿ.ಎನ್.ಗಳನ್ನು ಹಂತಹಂತವಾಗಿ ನಿಷೇಧಿಸಲು ಕ್ರಮಕೈಗೊಂಡಿತು. ಆದರೆ ಕೇಂದ್ರದ ಅಂದಿನ ವಿತ್ತ ಸಚಿವರು ಇದಕ್ಕೆ ಅಡ್ಡಗಾಲು ಹಾಕಿದರು. ಇಂದಿಗೂ ಭಾರತದ ಷೇರು ಮಾರುಕಟ್ಟೆಯಲ್ಲಿ ಪಿ.ಎನ್.ಗಳ ಹಾವಳಿ ನಿರಾತಂಕವಾಗಿ ಸಾಗಿದೆ, ಅಂದಿನ ವಿತ್ತ ಸಚಿವರಾದ ಪಿ.ಚಿದಂಬರಂ ಅವರ ಆಶೀರ್ವಾದದಿಂದ!

ಸ್ವಿಟ್ಜರ್ಲೆಂಡ್‌ನ ಒಂದು ಪ್ರಮುಖ ಪತ್ರಿಕೆ ಶ್ವೀಜರ್ ಇಲ್ಲಸ್ಟ್ರಿಯರ್ಟ್ (Schweitzer illustrierte) ತನ್ನ ಒಂದು ಸಂಚಿಕೆಯಲ್ಲಿ ಸ್ವಿಟ್ಜರ್ಲೆಂಡ್‌ನ ಬ್ಯಾಂಕಿನಲ್ಲಿ ರಹಸ್ಯ ಹಣ ಇಟ್ಟಿರುವ ಜಗತ್ತಿನ ೧೪ ರಾಷ್ಟ್ರಗಳ ನಾಯಕರ ವಿವರಗಳನ್ನು ಚಿತ್ರಸಮೇತ ಪ್ರಕಟಿಸಿತು. ಅದರಲ್ಲಿ ಒಂದು ಹೆಸರು ಭಾರತದ ಮಾಜಿ ಪ್ರಧಾನಿ ರಾಜೀವಗಾಂಧಿಯವರದ್ದು. ಅವರ ಖಾತೆಯಲ್ಲಿದ್ದದ್ದು ೨.೨ ಶತಕೋಟಿ ಡಾಲರ್. ಅದರ ಇಂದಿನ ಮೌಲ್ಯ ರೂ. ೫೦,೦೦೦ ಕೋಟಿಯನ್ನೂ ಮೀರಬಹುದು. ರಾಜೀವಗಾಂಧಿಯ ಮರಣಾನಂತರ ಅದರ ವಾರಸುದಾರರು ಕಾಂಗ್ರೆಸ್ ಅಧ್ಯಕ್ಷೆ

ಸೋನಿಯಾಗಾಂಧೀ ಹಾಗೂ ಮಗ ರಾಹುಲ್‌ಗಾಂಧಿ. ಇದು ಬೋಫೋರ್ಸ್ ಹಗರಣದಲ್ಲಿ ಗಳಿಸಿದ ಹಣ. ಕಾಂಗ್ರೆಸ್ ಪಕ್ಷ ವಿದೇಶಗಳಲ್ಲಿರುವ ಕಪ್ಪುಹಣದ ಮಾಲಿಕರನ್ನು ಪತ್ತೆಹಚ್ಚುವುದಕ್ಕೆ ಹಾಗೂ ಅದನ್ನು ಭಾರತಕ್ಕೆ ವಾಪಸು ತರಲು ಏಕೆ ಹಿಂದೇಟು ಹೊಡೆಯುತ್ತಿದೆ ಎಂಬುದರ ರಹಸ್ಯ ಇದೇ ಆಗಿದೆ.

೨೦೧೨ ಮೇ ತಿಂಗಳಿನಲ್ಲಿ ಕೇಂದ್ರ ವಿತ್ತ ಸಚಿವ ಪ್ರಣಬ್ ಮುಖರ್ಜಿ ಸಂಸತ್ತಿನಲ್ಲಿ ಮಂಡಿಸಿದ ಕಪ್ಪು ಹಣದ ಮೇಲಿನ ಶ್ವೇತಪತ್ರದಲ್ಲಿ, ವಿದೇಶಗಳಲ್ಲಿ ಕಪ್ಪು ಹಣ ಇಟ್ಟವರ ಯಾವ ಹೆಸರನ್ನೂ ಪ್ರಕಟಿಸದೇ ಇದ್ದುದಕ್ಕೂ ಇದೇ ಕಾರಣ.

೨೦೧೧ರ ಏಪ್ರಿಲ್-ಮೇ ತಿಂಗಳಿನಲ್ಲಿ, ತೀರಾ ಇತ್ತೀಚಿನವರೆಗೂ ಅಣ್ಣಾ ಹಜಾರೆ ಹಾಗೂ ಬಾಬಾ ರಾಮದೇವ್ ಅಪಾರ ಜನ ಬೆಂಬಲದೊಂದಿಗೆ ಭ್ರಷ್ಟಾಚಾರ ನಿರ್ಮೂಲನೆಗೆ ಪ್ರಬಲ ಜನಲೋಕಪಾಲ ಮಸೂದೆಗೆ ಆಗ್ರಹಿಸಿ ಹಾಗೂ ವಿದೇಶಗಳಲ್ಲಿರುವ ಭಾರತದ ಕಪ್ಪು ಹಣವನ್ನು ದೇಶಕ್ಕೆ ಹಿಂದೆ ತರಲು ಆಗ್ರಹಿಸಿ ಸತ್ಯಾಗ್ರಹಗಳನ್ನು ನಡೆಸಿದರು. ಬಾಬಾ ರಾಮದೇವ್‌ರ ಅನುಯಾಯಿಗಳು ದೆಹಲಿಯಲ್ಲಿ ಶಾಂತಿಯುತವಾಗಿ ನಡೆಸುತ್ತಿದ್ದ ಸತ್ಯಾಗ್ರಹವನ್ನು ಹತ್ತಿಕ್ಕಲು ಗೃಹಮಂತ್ರಿ ಪಿ.ಚಿದಂಬರಂ ನಡುರಾತ್ರಿಯಲ್ಲಿ ನಡೆಸಿದ ಪೋಲಿಸ್ ದೌರ್ಜನ್ಯ ಇಡೀ ನಾಗರಿಕ ಸಮಾಜ ತಲೆತಗ್ಗಿಸುವಂಥದ್ದು.

ಭ್ರಷ್ಟಾಚಾರ ನಿಯಂತ್ರಣಕ್ಕೆ ಒಂದು ಲೋಕಪಾಲ ಮಸೂದೆಯು ೧೯೬೮ರಿಂದಲೂ ಸಂಸತ್ತಿನಲ್ಲಿ ಕೊಳೆಯುತ್ತಾ ಬಿದ್ದಿದೆ, ೧೯೬೮ರಲ್ಲಿ ಅದನ್ನು ಲೋಕಸಭೆಯಲ್ಲಿ ಮೊದಲಬಾರಿಗೆ ಮಂಡಿಸಲಾಯಿತು. ಸರ್ಕಾರಕ್ಕೆ ಅದರ ಬಗ್ಗೆ ಆಸಕ್ತಿಯೇ ಇಲ್ಲದ ಕಾರಣ ಅದು ಮುಂದುವರಿಯಲಿಲ್ಲ. ೧೯೭೧, ೧೯೭೭, ೧೯೮೫, ೧೯೮೯, ೧೯೯೮ ಮತ್ತು ೨೦೦೧ - ಹೀಗೆ ಒಟ್ಟು ೮ ಬಾರಿ ಲೋಕಸಭೆಯಲ್ಲಿ ಲೋಕಪಾಲ ಮಸೂದೆ ಮಂಡನೆಯಾದರೂ ಮಂಜೂರಾತಿ ದೊರೆಯುವ ಮೊದಲೇ ಲೋಕಸಭೆ ವಿಸರ್ಜನೆಯಾದ್ದರಿಂದ ಅದು ಬೆಳಕು ಕಾಣಲೇ ಇಲ್ಲ. ಇದಕ್ಕೆ ಪ್ರಬಲ ಕಾರಣ ಆಳುವ ಪಕ್ಷದ ಅಂದರೆ ಕಾಂಗ್ರೆಸ್ ಪಕ್ಷದ ನಿರಾಸಕ್ತಿ. ಅಣ್ಣಾ ಹಜಾರೆ ತಂಡದ ಆಗ್ರಹದ ಮೇರೆಗೆ ಈಗ ಸಂಸತ್ತಿನ ಮುಂದಿರುವುದು ೯ನೇ ಪ್ರಯತ್ನ. ಈ ೧೫ನೇ ಲೋಕಸಭೆ ವಿಸರ್ಜನೆಯಾಗಲು ಕೇವಲ ೨ ವರ್ಷ ಬಾಕಿ ಇದೆ. ಅಷ್ಟರಲ್ಲಿ ಸರ್ವಸಮ್ಮತವಾದ ಪ್ರಬಲ ಜನಲೋಕಪಾಲ ಕಾಯ್ದೆ ರಚನೆಯಾಗಿ ಜಾರಿಗೆ ಬರುವುದು ತೀರಾ ಅಸಂಭವ.

ಕಪ್ಪು ಹಣವೇ ಅಲ್ಲದೆ ಜಾಗತಿಕರಣದ ನಂತರದಲ್ಲಿ ದೇಶ ಮಟ್ಟದಲ್ಲಿ ಹಾಗೂ ರಾಜ್ಯ ಮಟ್ಟದಲ್ಲಿ ನೂರಾರು ಭ್ರಷ್ಟಾಚಾರ ಪ್ರಕರಣಗಳು ಬೆಳಕಿಗೆ ಬಂದಿವೆ. ಸತ್ಯಂ ಕಂಪ್ಯೂಟರ್ಸ್‌ನ ರಾಮಲಿಂಗರಾಜು ಪ್ರಕರಣ, ೨ಜಿ ತರಂಗಾಂತರ ಪ್ರಕರಣ, ಕಾಮನ್‌ವೆಲ್ತ್ ಕ್ರೀಡಾಕೂಟ ಪ್ರಕರಣ, ಕಲ್ಲಿದ್ದಲು ಗಣಿ ಹರಾಜು ಪ್ರಕರಣ, ದೇವಾಸ್-ಆಂಟ್ರಿಕ್ಸ್ ಪ್ರಕರಣ, ಸೈನ್ಯಕ್ಕೆ ಟಾಟಾ ಟ್ರಕ್ಕುಗಳ ಖರೀದಿ ಪ್ರಕರಣ, ಮಹಾರಾಷ್ಟ್ರದ ಆದರ್ಶ ಹೌಸಿಂಗ್ ಸೋಸೈಟಿ ಪ್ರಕರಣ, ಕರ್ನಾಟಕ ಗಣಿ ಲೂಟಿ ಪ್ರಕರಣ, ಲೋಕಸಭೆಯಲ್ಲಿ ಪ್ರಶ್ನೆ ಕೇಳಲು ಲಂಚ ಪಡೆದ ಪ್ರಕರಣ, ಸಂಸತ್ತಿನಲ್ಲಿ ಓಟಿಗಾಗಿ ನೋಟು ಪ್ರಕರಣ - ಒಂದೇ ಎರಡೇ... ಹಗರಣ ಸಾಲುಸಲೇ ಆಚೆಗೆ ಬರುತ್ತಿವೆ. ಜೈ ಜಾಗತೀಕರಣ!

ಅರ್ಥ ಕಾಮಗಳೇ ಪ್ರಧಾನವಾಗಿರುವ ಪಾಶ್ಚಿಮಾತ್ಯ ಬಂಡವಾಳಶಾಹಿ ಅಥವಾ ಮುಕ್ತ ಮಾರುಕಟ್ಟೆ ವ್ಯವಸ್ಥೆಯಲ್ಲಿ ಭ್ರಷ್ಟಾಚಾರ ಅಂತರ್ಗತವಾಗಿದೆ. ಅರ್ಥಿಕತೆಗೂ ನೈತಿಕತೆಗೂ ಸಂಬಂಧವಿದೆಯೇ ಎಂಬುದು ಪಾಶ್ಚಿಮಾತ್ಯ ಪ್ರಪಂಚದಲ್ಲಿ ನೂರಾರು ವರ್ಷಗಳಿಂದಲೂ ಚರ್ಚೆಗೆ ಒಳಗಾದ ವಿಷಯವಾಗಿದೆ. ಆರ್ಥಿಕತೆಗೆ ನೈತಿಕತೆ (ಎಥಿಕ್ಸ್) ಅಗತ್ಯವಿಲ್ಲ ಎಂಬ ವಾದವೇ ಅಲ್ಲಿ ಪ್ರಾಧಾನ್ಯ ಪಡೆದಿದೆ. ಜಾಗತಿಕರಣದ ನಂತರದಲ್ಲಿ ಆ ವಾದ ಹೆಚ್ಚುಹೆಚ್ಚು ಜೋರಾಗಿ ಮಂಡನೆಯಾಗುತ್ತಿದೆ.

ಆಧುನಿಕ ಅರ್ಥಶಾಸ್ತ್ರದ ಪಿತಾಮಹ ಎಂದೇ ಪರಿಗಣಿತನಾದ ಆಡಂ ಸ್ಮಿತ್‌ನ ಅಭಿಪ್ರಾಯ ಹೀಗಿದೆ:

"Do not try to good. But let good emerge as a by product of selfishness."

"ಉದ್ದೇಶಪೂರ್ವಕವಾಗಿ ಒಳ್ಳೆಯದನ್ನು ಮಾಡಲು ಹೋಗಬೇಡ. ನಿನ್ನ ಸ್ವಾರ್ಥಪ್ರೇರಿತ ಕೆಲಸಗಳ ಉಪ-ಉತ್ಪನ್ನವಾಗಿ ಒಳ್ಳೆಯದು ಆದರೆ ಆಗಲಿ ಬಿಡು" ಎನ್ನುತ್ತಾನೆ ಆಡಂ ಸ್ಮಿತ್. ಬಂಡವಾಳಶಾಹಿಯ ಮುಖ್ಯ ಚಾಲಕಶಕ್ತಿಯೇ 'ಸ್ವಾರ್ಥ' ಎಂಬುದ ಅವನ ವಾದ.

ಬರ್ನಾರ್ಡ್ ಮ್ಯಾಂಡಿವಿಲ್ ಎಂಬ ಒಬ್ಬ ಅರ್ಥಶಾಸ್ತ್ರಜ್ಞ ೧೯೧೪ರಲ್ಲಿ ಬರೆದ 'ಫೇಬಲ್ ಆಫ್ ದಿ ಬೀಸ್' ಎಂಬ ಲೇಖನದಲ್ಲಿ ಹೀಗೆ ಹೇಳುತ್ತಾನೆ:

"Dishonesty, selfishness and devotion to vice are the emotions which lay at the root of prosperity" - 'ಅಪ್ರಾಮಣಿಕತೆ, ಸ್ವಾರ್ಥ ಮತ್ತು ದುಶ್ಚಟಗಳಿಗೆ ದಾಸರಾಗಿರುವುದು – ಇವೇ ಅಭಿವೃದ್ಧಿಯ ಅಡಿಪಾಯವಾಗಿವೆ.'

ಸುಮಾರು ೩೦೦ ವರ್ಷಗಳ ಹಿಂದೆ ಆಧುನಿಕ ಬಂಡವಾಳಶಾಹಿ ಹುಟ್ಟುವ ಮೊದಲೇ ಮ್ಯಾಂಡಿವಿಲ್ ಹೇಳಿದ ಮಾತುಗಳು ಇಂದಿಗೆ ಎಷ್ಟು ಪ್ರಸ್ತುತವಾಗಿವೆ ನೋಡಿ!

ನೋಬೆಲ್ ಪ್ರಶಸ್ತಿ ಗಳಿಸಿದ, ೨೦ನೇ ಶತಮಾನದ ಅಮೆರಿಕದ ಪ್ರಸಿದ್ಧ ಅರ್ಥಶಾಸ್ತ್ರಜ್ಞ ಮಿಲ್ಟನ್ ಫ್ರೀಡಮನ್ ಹೇಳುತ್ತಾನೆ: "The social responsibility of Business is to increase its profits" - 'ಹೆಚ್ಚು ಲಾಭಗಳಿಸುವುದೇ ಉದ್ದಿಮೆಗಳ ಸಾಮಾಜಿಕ ಜವಾಬ್ದಾರಿ.'

ಒಂದು ಉದ್ದಿಮೆ ಎಷ್ಟು ಲಾಭಗಳಿಸಿತು ಎಂಬುದು ಮುಖ್ಯವೇ ಹೊರತು, ಹೇಗೆ ಎಂಬುದು ಮುಖ್ಯವಲ್ಲ. ಅಂದರೆ ಗುರಿಸಾಧನೆ (ಎಂಡ್ಸ್) ಮುಖ್ಯವೇ ಹೊರತು ಅದರ ಮಾರ್ಗ (ಮೀನ್ಸ್) ಮುಖ್ಯವಲ್ಲ ಎಂಬುದು ಮಿಲ್ಟನ್ ಫ್ರೀಡಮನ್‌ನ ಅಭಿಪ್ರಾಯವಾಗಿದೆ. ಇದು ಇದು ಎಷ್ಟು ಪ್ರಸ್ತುತವಾಗಿದೆ!!

ಬಯಾತ್ ಗ್ರಿಫಿತ್ ಎಂಬ ವಿದ್ವಾಂಸ ಹೇಳುತ್ತಾನೆ:

"The business of Business is Business, in which a moral standard has no relevance." - 'ಲಾಭಗಳಿಕೆ ವ್ಯವಹಾರದ ಉದ್ದೇಶವಾಗಿರುತ್ತದೆ. ನೈತಿಕತೆ ಅದಕ್ಕೆ ಪ್ರಸ್ತುತವಲ್ಲ.'

ಇದೂ ಕೂಡ ಇಂದಿನ ಕಾಲಮಾನಕ್ಕೆ ತೀರಾ ಪ್ರಸ್ತುತ.

'Greed is good' ಎಂಬುದು ಅಮೆರಿಕದ ಅತ್ಯಂತ ಜನಪ್ರಿಯ ಹೇಳಿಕೆ. ಒಬ್ಬ ವ್ಯಕ್ತಿ, ಒಂದು ಉದ್ಯಮ ಸಂಸ್ಥೆ ಹಾಗೂ ಒಂದು ದೇಶಕ್ಕೆ ದುರಾಸೆ ತುಂಬಾ ಅಗತ್ಯ. ಅದೇ ಅಭಿವೃದ್ಧಿಯ ಚಾಲಕಶಕ್ತಿ ಎಂಬುದು ಅಮೆರಿಕನ್ನರ ನಿಲುವು.

Greed is followed by Fraud – ದುರಾಸೆಯನ್ನು ಭ್ರಷ್ಟಾಚಾರವು ಅನುಸರಿಸುತ್ತದೆ ಎಂಬುದು ಸಾಮಾನ್ಯ ತಿಳುವಳಿಕೆ. ಅದನ್ನೇ ಇಂದು ನಾವು ಕಾಣುತ್ತಿರುವುದು. ೧೧-೦೭-೨೦೧೨ರ ಬಿಸಿನೆಸ್ ಲೈನ್ ಪತ್ರಿಕೆಯಲ್ಲಿ ಒಂದು ಸುದ್ದಿಯ ಶೀರ್ಷಿಕೆ ಹೀಗಿತ್ತು:

1 in 4 wall street executives says, wrong doing is a must.

'ಲೆಬ್ಯಾಟನ್ ಸುಚಾರೋ' ಎಂಬ ಸಮೀಕ್ಷಾ ಸಂಸ್ಥೆ ಈಚೆಗೆ ನಡೆಸಿದ ಅಮೆರಿಕದ ವಾಲ್‌ಸ್ಟ್ರೀಟ್ ಹಾಗೂ ಇಂಗ್ಲೆಂಡ್‌ನ ೫೦೦ ಹಣಕಾಸು ಸಂಸ್ಥೆಗಳ ಹಿರಿಯ ಅಧಿಕಾರಿಗಳ ಸಮೀಕ್ಷೆಯಲ್ಲಿ, ೨೪% ಅಧಿಕಾರಿಗಳು 'ಹಣಕಾಸು ಸೇವೆಗಳ ವೃತ್ತಿಪರರು ಯಶಸ್ವಿಯಾಗಲು ಅನೈತಿಕ ಅಥವಾ ಅಪರಾಧ ಕಾರ್ಯಗಳಲ್ಲಿ ತೊಡಗಬೇಕಾಗುವುದು ಅಗತ್ಯ' ಎಂದು ತಾವು ನಂಬುವುದಾಗಿ ಅಭಿಪ್ರಾಯ ಹೇಳಿದ್ದಾರೆ.'

ಜಗತ್ತಿನ ಬ್ಯಾಂಕಿಂಗ್ ಉದ್ಯಮ ಯಾವ ದಿಕ್ಕಿನತ್ತ ಸಾಗುತ್ತಿದೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ.

ಒಟ್ಟಿನಲ್ಲಿ ಇಡೀ ಜಾಗತಿಕರಣ ಪ್ರಕ್ರಿಯೆ, ವರಕವಿ ದ.ರಾ.ಬೇಂದ್ರೆ ಹೇಳುವಂತೆ

"ಕುರುಡು ಕಾಂಚಾಣ ಕುಣಿಯುತ್ತಲಿತ್ತ
ಕಾಲಿಗೆ ಬಿದ್ದವರ ತುಳಿಯುತ್ತಲಿತ್ತ"

ಎಂಬಂತಾಗಿದೆ. ಜೀವನದ ಎಲ್ಲ ಮೌಲ್ಯಗಳನ್ನೂ ಗಾಳಿಗೆ ತೂರಿ 'ಅರ್ಥ-ಕಾಮ'ಗಳನ್ನೇ ಆರಾಧಿಸುವ ಮುಕ್ತ ಮಾರುಕಟ್ಟೆ ವ್ಯವಸ್ಥೆಯನ್ನು ಭಾರತ ಒಪ್ಪಿಕೊಂಡಮೇಲೆ ಭ್ರಷ್ಟಾಚಾರ ಬೆಳೆಯದೆ ಮತ್ತೇನು ಬೆಳೆದೀತು? ಮಹಾತ್ಮ ಗಾಂಧೀ ತಮ್ಮ ಪ್ರಸಿದ್ಧ ಕೃತಿ 'ಹಿಂದ್ ಸ್ವರಾಜ್'ನಲ್ಲಿ ಆರ್ಥಿಕತೆ ಹಾಗೂ ನೈತಿಕತೆಗಳ (ಧರ್ಮ) ಸಂಬಂಧದ ಬಗ್ಗೆ ಹೀಗೆ ಬರೆಯುತ್ತಾರೆ:

"Economics that hurts the moral well being of an individual or a nation, is immoral and therefore sinful."

ಒಬ್ಬ ವ್ಯಕ್ತಿಯ ಅಥವಾ ಒಂದು ರಾಷ್ಟ್ರದ ನೈತಿಕ ಸೌಖ್ಯವನ್ನು ಹಾಳುಮಾಡುವ ಅರ್ಥಶಾಸ್ತ್ರವು ಅನೈತಿಕವಾದದ್ದು. ಆದ್ದರಿಂದಲೇ ಪಾಪಭರಿತವಾದದ್ದು. ಅವರು ಮುಂದುವರಿದು ಹೇಳುತ್ತಾರೆ:

"True Economics stands for social justice and moral values."

'ನಿಜವಾದ ಸಾಮಾಜಿಕ ಅರ್ಥಶಾಸ್ತ್ರವು ಸಾಮಾಜಿಕ ನ್ಯಾಯ ಮತ್ತು ನೈತಿಕ ಮೌಲ್ಯಗಳನ್ನು ಬೆಂಬಲಿಸುತ್ತದೆ.'

೨೦೦೦ ವರ್ಷಗಳ ಹಿಂದೆ ಕೌಟಿಲ್ಯ ಅಥವಾ ಚಾಣಕ್ಯ ಹೇಳಿದ: "ಸುಖಸ್ಯ ಮೂಲಂ ಧರ್ಮಃ" ಅಂದರೆ ಸುಖದ ಮೂಲ ಧರ್ಮ ಅಥವಾ ನೈತಿಕತೆ.

ಮನು ತನ್ನ ಧರ್ಮಶಾಸ್ತ್ರದಲ್ಲಿ ಹೇಳಿದ: "ಪರಿತ್ಯಜೇತ್ ಅರ್ಥ ಕಾಮೌ

ಯೌ ಸ್ಯಾತಾಂ ಧರ್ಮ ವರ್ಜಿತೌ।" ಅಂದರೆ ಧರ್ಮ ವಿರೋಧಿಯಾದ ಆರ್ಥಿಕ ವ್ಯವಹಾರಗಳು ಹಾಗೂ ಕಾಮನೆಗಳನ್ನು ಪರಿತ್ಯಜಿಸತಕ್ಕದ್ದು.

ಮಹಾತ್ಮ ಗಾಂಧೀಯವರು ಪ್ರತಿಪಾದಿಸಿದ ಸಪ್ತ ಮಹಾ ಪಾತಕಗಳನ್ನೊಮ್ಮೆ ಪರಿಶೀಲಿಸೋಣ.

೧. ತತ್ವಹೀನ ರಾಜಕೀಯ
೨. ಶ್ರಮವಿಲ್ಲದ ಸಂಪತ್ತು
೩. ಅಂತಃಪ್ರಜ್ಞೆ ಇಲ್ಲದ ಭೋಗ
೪. ಚಾರಿತ್ರ್ಯವಿಲ್ಲದ ಪಾಂಡಿತ್ಯ
೫. ನೈತಿಕತೆ ಇಲ್ಲದ ವಾಣಿಜ್ಯ
೬. ಮಾನವೀಯತೆ ಇಲ್ಲದ ವಿಜ್ಞಾನ
೭. ತ್ಯಾಗವಿಲ್ಲದ ಆರಾಧನೆ

ಜಾಗತಿಕರಣದ ನಂತರದ ಭಾರತದಲ್ಲಿ ಗಾಂಧೀಜಿ ಹೇಳಿದ ಸಪ್ತ ಮಹಾಪಾತಕಗಳೇ ದೇಶದ ಅಲಿಖಿತ ಸಂವಿಧಾನವಾಗಿದೆ. ಹಾಗಾಗಿಯೇ ದೇಶದಲ್ಲಿ ಭ್ರಷ್ಟಾಚಾರದ ಬೆಳೆ ಹುಲುಸಾಗಿದೆ.

ಈ ಸಮಸ್ಯೆಗೆ ಪರಿಹಾರ ನೈತಿಕತೆ ಆಧಾರಿತ ಆರ್ಥಿಕತೆಯಲ್ಲಿದೆ. ಹರಿದ ಚಪ್ಪಲಿಗೆ ತೇಪೆ ಹಾಕುವುದರಿಂದ ಏನೂ ಪ್ರಯೋಜನವಿಲ್ಲ. ಅದನ್ನು ದೂರ ಬಿಸಾಕಿ ಹೊಸ ಚಪ್ಪಲಿ ಧರಿಸೋಣ. ಅದು ಶುದ್ಧ ಭಾರತೀಯ ಚಪ್ಪಲಿಯಾಗಿರಲಿ. ಮುಕ್ತ ಮಾರುಕಟ್ಟೆ ನೀತಿಯು ಭ್ರಷ್ಟಾಚಾರಕ್ಕೆ ವೇಗವರ್ಧಕವಾಗಿ ಕೆಲಸ ಮಾಡುತ್ತಿದೆ ಎಂಬುದು ಸುಸ್ಪಷ್ಟ. ಈ ಸಮಸ್ಯೆಗೆ ಪರಿಹಾರವೂ ಸ್ಪಷ್ಟವಾಗಿದೆ–ಅದು ಮುಕ್ತ ಮಾರುಕಟ್ಟೆ ನೀತಿಗೆ ಕಡಿವಾಣ ಹಾಕುವುದು. ನಮ್ಮ ಆರ್ಥಿಕ ನೀತಿಯನ್ನು ಜಾಗತಿಕರಣಗೊಳಿಸುವುದನ್ನು ನಿಲ್ಲಿಸಿ ಭಾರತೀಕರಣಗೊಳಿಸಬೇಕು. ಕೃಷಿ ಹಾಗೂ ಗ್ರಾಮೀಣ ಕೈಗಾರಿಕೆಗಳು, ಉದ್ಯೋಗ ಸೃಷ್ಟಿ, ದೇಶೀಯ ಮಾರುಕಟ್ಟೆಯ ಸಬಲೀಕರಣ – ಶಿಕ್ಷಣ–ಆರೋಗ್ಯ–ವಸತಿ–ಇವು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಆದ್ಯತೆ ಪಡೆಯಬೇಕೇ ಹೊರತು ಜಿ.ಡಿ.ಪಿ., ಅಭಿವೃದ್ಧಿ ದರ, ರಫ್ತು ಉತ್ತೇಜನ – ಇವುಗಳಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಅರ್ಥಿಕತೆಯ ತಳಹದಿ ನೈತಿಕತೆ ಎಂಬುದನ್ನು ಶಿಕ್ಷಣದ ಎಲ್ಲ ಹಂತಗಳಲ್ಲಿ ಅದರಲ್ಲೂ ಬಿಸಿನೆಸ್ ಮ್ಯಾನೇಜ್‌ಮೆಂಟ್, ಇಂಜಿನಿಯರಿಂಗ್ ಮುಂತಾದ ಉನ್ನತ ಶಿಕ್ಷಣದಲ್ಲಿ ಒತ್ತಿ ಹೇಳಬೇಕು.

(ಸಾಭಾರ : ಉತ್ಥಾನ)

* * *

ಶ್ಲೇಷಸಿದ್ಧಾಂತ – ಒಂದು ನಿರೂಪಣೆ

– ಪ್ರೊ॥ ಗುರುಪಾದ ಕೆ. ಹೆಗಡೆ

॥ ದೇವಾನಾಮಪಿ ದಿವ್ಯತ್ವಂ ಯಮೇವಾಶ್ರಯತೇ ವಿಭುಮ್
ತ್ರಿವಿಕ್ರಮೋಽಯಮಿತ್ಯುಕ್ತಂ ವಂದೇ ತಂ ಕಾಲಪೂರುಷಮ್ ॥

ಪರಮಾತ್ಮನಿಲ್ಲದ ಸ್ಥಳವು ಇಲ್ಲವೇ ಇಲ್ಲವೆಂದು ಹೇಳಲಾಗುತ್ತದೆ. ದೇವಾನುದೇವತೆಗಳ ದಿವ್ಯತ್ವಕ್ಕೆ ಪರಮಾತ್ಮನೇ ಮೂಲಕಾರಣನೆಂದೂ ಹೇಳಲಾಗುವುದು. ದೇವರ ಅಸ್ತಿತ್ವವನ್ನು ನಂಬದವರೂ ಸಹ ಯಾವುದೋ ಒಂದು ಅವ್ಯಕ್ತ ಶಕ್ತಿಯಿದೆಯೆಂದು ಒಪ್ಪುವುದೂ ಇದೆ. ಅಸ್ತಿತ್ವ-ನಾಸ್ತಿತ್ವವಾದಗಳೆರಡೂ ಮಾನವ ಪ್ರಪಂಚದಲ್ಲಿ ತರ್ಕಬದ್ಧವಿಚಾರಗಳ ಪ್ರಾರಂಭದೊಂದಿಗೆ ರೂಪುಗೊಂಡು ಬಂದಿವೆ. ಮೇಲಿನ ಶ್ಲೋಕವು ಶ್ಲೇಷಸಿದ್ಧಾಂತದ ಪ್ರಾರಂಭದ ಶ್ಲೋಕವಾಗಿದ್ದು ಕಾಲಪುರುಷನೇ ದೇವತೆಗಳ ದಿವ್ಯತ್ವಕ್ಕೆ ಕಾರಣನೆಂದು ಹೇಳುತ್ತದೆ. ಇಂದ್ರನು ವೇದಕಾಲದಲ್ಲಿ ಪ್ರಮುಖ ದೇವನಾದರೆ, ಮುಂದೆ, ಪುರಾಣದ ಕಾಲದಿಂದ ತ್ರಿಮೂರ್ತಿಗಳು ಪ್ರಮುಖರಾದರು ಹಾಗೂ ಗಣಪತಿ-ದುರ್ಗೆಯರಿಗೂ ಪ್ರಾಧಾನ್ಯ ಬಂದುಬಿಟ್ಟಿತು. ಹಾಗೆಯೇ ಈ ಹಿಂದೆ ಕಾವ್ಯ-ಸಾಹಿತ್ಯಾದಿಗಳಲ್ಲಿ ರಸ-ರೀತಿ-ಅಲಂಕಾರ-ಧ್ವನಿ-ವಕ್ರೋಕ್ತಿಗಳು ಆತ್ಮಸ್ಥಾನದಲ್ಲಿ ವಿರಾಜಿಸುತ್ತಿದ್ದರೆ, ಈಗ, ೨೦-೨೧ನೆಯ ಶತಮಾನಗಳಲ್ಲಿ ಶ್ಲೇಷತತ್ವವು ಆತ್ಮಸ್ಥಾನವನ್ನು ಅಲಂಕರಿಸುವಂತೆ ಪ್ರಸ್ತಾಪಿಸುವುದು ಈ ಶ್ಲೇಷಸಿದ್ಧಾಂತಕಾರನ ಉದ್ದೇಶವಾಗಿದೆ. ವಂದನಾತ್ಮಕವಾದ ಈ ಪ್ರಾರಂಭದ ಪದ್ಯದಲ್ಲಿ ತ್ರಿಪುರಾಸುರರನ್ನು ಸಂಹರಿಸಿದ ಹರ ಹಾಗೂ ಮೂರೇ ಹೆಜ್ಜೆಗಳಲ್ಲಿ ಮೂರೂ ಲೋಕಗಳನ್ನು ಅಳೆದ ವಿಷ್ಣು – ಈ ಇಬ್ಬರನ್ನೂ ಕಾಲಪುರುಷನನ್ನಾಗಿ ಶ್ಲೇಷಾತ್ಮಕವಾಗಿ ದರ್ಶಿಸಲಾಗಿದೆ.

ಜಗತ್ತಿನಲ್ಲಿ ದ್ವಿಮುಖ ನಡವಳಿಕೆಗಳು ಸರ್ವೇಸಾಮಾನ್ಯವಾಗಿ ಕಂಡುಬರುತ್ತವೆ. ಮನುಷ್ಯ ಒಳಗೆ ತನ್ನ ಅಂತರಂಗದಲ್ಲಿ ಏನೋ ಆಗಿದ್ದು, ಹೊರಗೆ, ತೋರ್ಪಡಿಕೆಗೆ ಏನೋ ಆಗಿರುವುದು ನನ್ನ ಮನಸ್ಸಿನಲ್ಲಿ ತುಡಿಯುತ್ತಿತ್ತು. ಮಾನವನಲ್ಲಿಯ ದ್ವಿಮುಖವ್ಯಕ್ತಿತ್ವದ ವಿಚಾರವು ಈ

ಸಿದ್ಧಾಂತಕಾರನನ್ನು ಸೆಳೆಯಲು ಮೊದಲು ಕಾರಣವಾದದ್ದು ಈತನಿಗೆ ಕಾಲೇಜಿನ ಅಭ್ಯಾಸದಲ್ಲಿದ್ದ ಒಂದು ಪಠ್ಯಗ್ರಂಥ **ಡಾ॥ ಜೇಕಿಲ್ & ಮಿ॥ ಹೈಡ್.** ಆರ್. ಎಲ್. ಸ್ಟಿವಿನ್‌ಸನ್‌ನ ಈ ಕೃತಿಯಲ್ಲಿ ಅಸಮಾನ ಸುಂದರ ರೂಪದ ಸುಸಂಸ್ಕೃತ ಸಹೃದಯ ಸದ್ಗೃಹಸ್ಥ ಡಾ॥ ಜೇಕಿಲ್ ಅನ್ನುವವನು ಅಂತರಂಗದಲ್ಲಿ ಅತ್ಯಂತ ಕುರೂಪಿ ನಿರ್ದಯಿ ಕೊಲೆಗಾರನಾಗಿರುತ್ತಾನೆ. ನಿಜವಾಗಿ ತಾನು ಏನೆಂಬುದನ್ನು ಕಂಡುಹಿಡಿಯಲು ಔಷಧವೊಂದನ್ನು ಸಂಶೋಧಿಸಿ ಅದನ್ನು ಕುಡಿದಾಗ ಆ ಔಷಧದ ಪರಿಣಾಮ ಇರುವವರೆಗೂ ಆತ ಕ್ರೂರ ಕೊಲೆಗಾರನಾಗಿರುತ್ತಾನೆ, ಕುರೂಪಿ ಹಾಗೂ ಕುಬ್ಜನಾಗಿಬಿಡುತ್ತಾನೆ; ಆಗ ಆತ ತನಗೆ ಇಟ್ಟುಕೊಂಡ ಹೆಸರು ಮಿ॥ಹೈಡ್; ಮಹಾಭಾರತದಲ್ಲಿ ಬರುವ "ಯದಿ ನಾಮಾಸ್ಯ ಕಾಯಸ್ಯ ಯದಂತಸ್ತದ್ಬಹಿರ್ಭವೇತ್; ದಂಡಮಾದಾಯ ಲೋಕೋಽಯಂ ಶುನ:ಕಾಕಾಂಶ್ಚ ವಾರಯೇತ್" ಅನ್ನುವ ಶ್ಲೋಕವು ಮತ್ತೊಂದು ಕಾರಣವಾಯಿತು. ಮನುಷ್ಯನು ಅಂತರಂಗದಲ್ಲಿ ತಾನು ಹೇಗೆ ಇದ್ದದ್ದು ಅನ್ನುವುದನ್ನು ಬಹಿರಂಗದಲ್ಲಿ ವ್ಯಕ್ತಗೊಳಿಸಿದ್ದೇ ಆದರೆ ಆತನು ಬದುಕಿ ಉಳಿಯುವುದೇ ಅಸಾಧ್ಯವೆನ್ನುವುದು ಈ ಶ್ಲೋಕದ ಮಥಿತಾರ್ಥ.

ಕೂಡಿಕೊಂಡಿರುವುದು ಅನ್ನುವುದು 'ಶ್ಲೇಷ'ಶಬ್ದದ ಅರ್ಥ. ಶ್ಲಿಷ್ ಅನ್ನುವ ಧಾತು ಇದಕ್ಕೆ ಮೂಲ. ಎರಡು ಅಥವಾ ಎರಡಕ್ಕಿಂತ ಹೆಚ್ಚು ಅರ್ಥಗಳು ಶಬ್ದದಲ್ಲಿಯೋ ವಾಕ್ಯದಲ್ಲಿಯೋ ಕಂಡುಬಂದಾಗ ಅದನ್ನು ಶ್ಲೇಷಾಲಂಕಾರವೆಂದು ಗುರುತಿಸಲಾಗುತ್ತದೆ. ಭರತಮುನಿಯಿಂದ ಮೊಳಕೆಯೊಡೆದು ಭಾಮಹ, ದಂಡಿ ಮುಂತಾದ ಅಲಂಕಾರಶಾಸ್ತ್ರಜ್ಞರಿಂದ ವಿಸ್ತ್ರತವಾಗಿ ಬೆಳೆದುಬಂದ ಶ್ಲೇಷಾಲಂಕಾರವನ್ನು ಕುರಿತು ಅಭ್ಯಾಸ ಮಾಡುವಾಗಲೆಲ್ಲ ಡಾ॥ ಜೇಕಿಲ್ & ಮಿ॥ ಹೈಡ್ ಹಾಗೂ ಮಹಾಭಾರತದಲ್ಲಿ ಅದಕ್ಕೆ ಸಂವಾದಿಯಾಗಿ ಕಂಡುಬಂದ ಶ್ಲೋಕ–ಇವು ಈ ಶ್ಲೇಷಸಿದ್ಧಾಂತಕಾರನಲ್ಲಿ ಏನೋ ಒಂದು ಹೊಸ ವಿಚಾರತರಂಗವನ್ನು ಹುಟ್ಟಿಸುತ್ತಿತ್ತು. ಶ್ಲೇಷದ ಬಗ್ಗೆ ವಿಶೇಷ ಆಸ್ಥೆ ಮೂಡುತ್ತಿತ್ತು. ಆದರೂ ಈತನಿಗೆ ವಿದ್ಯಾರ್ಥಿದೆಸೆಯಲ್ಲಿ ಆನಂದವರ್ಧನನ ಧ್ವನಿಸಿದ್ಧಾಂತವೇ ಅಚ್ಚುಮೆಚ್ಚಿನದಾಗಿತ್ತು. ಅದಕ್ಕಾಗಿ ಈತ ಬರೆದ ಮೊದಲ ಕೃತಿ "ಕಾವ್ಯದಲ್ಲಿ ಧ್ವನಿ". ಧ್ವನಿಸಿದ್ಧಾಂತವನ್ನು ಮೆಚ್ಚಿ ಸರಳವಾಗಿ ಸುಲಭಗ್ರಾಹ್ಯವಾದ ಉದಾಹರಣೆಗಳೊಂದಿಗೆ ಬರೆದ ಈತನ ಈ ಕೃತಿಯನ್ನು ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗವು ೧೯೭೧ರಲ್ಲಿ ಪ್ರಕಟಿಸಿತು. ಈ

ಕೃತಿಯು ಸಾಕಷ್ಟು ಪ್ರಸಿದ್ಧಿಯನ್ನೂ ಪಡೆದು ಅನಂತರದಲ್ಲಿ ಇನ್ನೊಂದೆಡೆ ದ್ವಿತೀಯ ಮುದ್ರಣವನ್ನೂ ಕಂಡಿತು.

ಅದೇ ೧೯೭೧ರಲ್ಲಿಯೇ ನಾನು ಶ್ಲೇಷಾಲಂಕಾರವನ್ನು ಕುರಿತು ವಿಶೇಷವಾದ ಅಧ್ಯಯನವನ್ನು ಪ್ರಾರಂಭಿಸಿದೆ. ಅದಕ್ಕಾಗಿ ಯು.ಜಿ.ಸಿ.ಯಿಂದ Post Doctoral Thesis ಸಿದ್ಧಪಡಿಸಲು ವಿಶೇಷ ಆರ್ಥಿಕ ಸಹಾಯವೂ ದೊರೆಯಿತು. ನನ್ನ ಅಧ್ಯಯನ– ಅನ್ವೇಷಣೆಗಳಲ್ಲಿ ಶ್ಲೇಷತತ್ವದ ಬ್ರಹ್ಮಾಂಡವ್ಯಾಪಿ ಸತ್ವವು ಒಳಗಣ್ಣಿಗೆ ಗೋಚರಿಸಿತು. ಶ್ಲೇಷವು ಕೇವಲ ಒಂದು ಅಲಂಕಾರ ಹಾಗೂ ಕಾವ್ಯಗುಣ ಇವಕ್ಕೆ ಮಾತ್ರ ಸೀಮಿತವಾಗಿರದೆ ಒಂದು ತತ್ವವಾಗಿ ಸಮಸ್ತ ಚರಾಚರಜಗತ್ತನ್ನೇ ವ್ಯಾಪಿಸಿದೆ ಅನ್ನುವ ಸತ್ಯವು ಗೋಚರಿಸಿತು. ನನ್ನಲ್ಲಿ ಉದಿಸಿದ ಈ ವಿಚಾರವು ಹಿಂದೆ ಯಾರಿಂದಲಾದರೂ ಹೇಳಲ್ಪಟ್ಟಿದೆಯೋ ಹೇಗೆ ಅನ್ನುವುದನ್ನು ಶೋಧಿಸಲು ಭಾರತದಾದ್ಯಂತ ಪ್ರಾಚೀನ ಹಸ್ತಪ್ರತಿಗಳ ಗ್ರಂಥಾಲಯಗಳಿಗೆ ನನ್ನ ರಜೆಯ ಸಮಯಗಳಲ್ಲೆಲ್ಲ ಹೋಗಿ ತಡಕಾಡಿದೆ. ಕಾವ್ಯದ ಆತ್ಮವನ್ನಾಗಿ ಶ್ಲೇಷತತ್ವವನ್ನು ಇಲ್ಲಿಯವರೆಗೆ ಯಾರೂ ಹೇಳಿಲ್ಲ ಅನ್ನುವುದು ಮನದಟ್ಟಾಯಿತು. ಶ್ಲೇಷವು ಒಂದು ತತ್ವವಾಗಿ, ಶ್ಲೇಷತತ್ವವಾಗಿ ಕೇವಲ ಕಾವ್ಯದ, ಅರ್ಥಾತ್, ಸಾಹಿತ್ಯದ ಆತ್ಮ ಮಾತ್ರವಲ್ಲ ಮಾನವ ಜೀವನದ ಹಾಗೂ ವ್ಯಕ್ತ ಸಮಸ್ತ ಜಗತ್ತಿನ ಮತ್ತು ಸರ್ವಕಲಾಪ್ರಪಂಚದ ಆತ್ಮ ಅನ್ನುವ ನನಗೆ ಗೋಚರಿಸಿದ ತಥ್ಯವನ್ನು, ನಿತ್ಯಸತ್ಯವನ್ನು, ಗ್ರಂಥಸ್ಥಗೊಳಿಸಿದೆ. ಈ ಕುರಿತು ಯು.ಜಿ.ಸಿ. ಸ್ಕೀಮಿನಲ್ಲಿ ನಾನು ಸ್ವತಂತ್ರವಾಗಿ ಬರೆದ Pun In Sanskrit Literature – A New Approach ಅನ್ನುವ ಗ್ರಂಥವನ್ನು ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗವು ೧೯೮೨ರಲ್ಲಿ ಪ್ರಕಟಿಸಿತು. ಆ ಗ್ರಂಥದ ಕೊನೆಯಲ್ಲಿ, ಅಪೆಂಡಿಕ್ಸ್‌ನಲ್ಲಿ, ಸಂಸ್ಕೃತದಲ್ಲಿ, ಅನುಷ್ಟುಪ್ ಛಂದಸ್ಸಿನಲ್ಲಿ, ಪ್ರಾಚೀನ ಕ್ರಮದಲ್ಲಿ, ೧೬೪ ಕಾರಿಕೆಗಳನ್ನು ಬರೆದು ಶ್ಲೇಷಸಿದ್ಧಾಂತವನ್ನು ಶಾಸ್ತ್ರೀಯಗೊಳಿಸಿದೆನು.

ಶ್ಲೇಷಸಿದ್ಧಾಂತವನ್ನು ಓಂಕಾರದಿಂದಲೇ ಪ್ರಾರಂಭಿಸಲಾಯಿತು. ಪರಮಾತ್ಮನ ಸ್ಪಂದನದಿಂದ ಮೂಡಿಬಂದ ಓಂದಿಂದ ಇಡೀ ಬ್ರಹ್ಮಾಂಡವು ಅಸ್ತಿತ್ವಕ್ಕೆ ಬಂದಿತು; ಮುಂದೆ ಎಂದೋ ಓಂಕಾರದಲ್ಲಿಯೇ ಬ್ರಹ್ಮಾಂಡವು ಲಯಗೊಳ್ಳುವುದು ಅನ್ನುವುದು ಭಾರತೀಯ ಸನಾತನ ನಂಬಿಕೆ ಹಾಗೂ ವೇದೋಪನಿಷತ್ತುಗಳ ಸಾರಸರ್ವಸ್ವ. ಈ ಓಂಕಾರದೊಂದಿಗೇ ಶ್ಲೇಷತತ್ವವು ಅಸ್ತಿತ್ವಕ್ಕೆ ಬಂದಿತೆನ್ನುವುದು ಈ ಶ್ಲೇಷಸಿದ್ಧಾಂತದ ಪ್ರತಿಪಾದನೆ. ಇದಕ್ಕೆ ಕಾರಣ

ಓಂಕಾರದಲ್ಲಿಯೇ ಕಂಡುಬರುವ ವಿವಿಧಾರ್ಥಗಳ ಒಕ್ಕೂಟ. ಅ-ಉ-ಮ್ ಎಂಬ ಮೂರಕ್ಷರಗಳ ಸಾಂಗತ್ಯದಿಂದ ಮೂಡಿಬಂದ ಓಂಕಾರವು ಸೃಷ್ಟಿ-ಸ್ಥಿತಿ-ಲಯಕರ್ತೃ ಬ್ರಹ್ಮ-ಹರಿ-ಹರರನ್ನು ಅರ್ಥೈಸುತ್ತದೆ; ನಾದತತ್ವವನ್ನೂ ಸೂಚಿಸುತ್ತದೆ. ಆತ್ಮಸಾಧನಾಕ್ರಮದಲ್ಲಿ ಯೋಗಿಗೆ ಮೊದಲು ಗೋಚರಿಸುವ ಅನಾಹತನಾದ ಓಂಕಾರ; ಇದೇ ಓಂಕಾರದಲ್ಲಿಯೇ ಜೀವಾತ್ಮವು ಲಯವಾಗಿ ಆ ಯೋಗಿಯು ಮೋಕ್ಷವನ್ನು ಪಡೆಯುತ್ತಾನೆ; ಅದೇ ಆ ಜೀವಾತ್ಮದ ಪ್ರಳಯ. ಓಂಕಾರವೇ ಗಣಪತಿಯಾಗಿ, ಹನುಮಂತನಾಗಿ, ಮುಂದೆ, ಕಾಲಕ್ರಮೇಣ ರೂಪುಗೊಂಡದ್ದು. ಓಂಕಾರದಲ್ಲಿಯ ಕೊಂಬು ಗಣಪತಿಯ ಸೊಂಡಿಲು, ಮಾರುತಿಯ ಬಾಲ ಹಾಗೂ ಇದೇ ಆಧ್ಯಾತ್ಮಿಕ ಸುಷುಮ್ನಾನಾಡಿ; ಇದೇ ಶ್ರೀಕೃಷ್ಣನ ಕೊಳಲು ಮತ್ತು ಸರಸ್ವತಿಯ ವೀಣೆ. ಹೀಗೆ ಓಂಕಾರವು ವಿವಿಧಾರ್ಥದಲ್ಲಿದ್ದು ಶ್ಲೇಷತತ್ವವನ್ನೇ ಆತ್ಮವನ್ನಾಗಿ ಪಡೆದಿದೆ. ಈ ವಿವಿಧಾರ್ಥತತ್ವವಾದ ಶ್ಲೇಷತತ್ವದ ಮೇಲೆಯೇ ಜಗತ್ತು ನಿಂತಿದೆ ಅನ್ನುವುದನ್ನು ಸೂಚಿಸಲಿಕ್ಕಾಗಿಯೇ ಪುರಾಣಗಳು ಜಗತ್ತನ್ನೇ ಆದಿಶೇಷನು ಹೊತ್ತುಕೊಂಡಿದ್ದಾನೆ ಎಂದು ಹೇಳುವುದು; ಹಾಗೆಯೇ ವಿಷ್ಣುವು ಆದಿಶೇಷನ ಮೇಲೆ ಪವಡಿಸಿರುತ್ತಾನೆ ಎಂದು ಹೇಳುವುದು. ಆದಿಶೇಷ ಒಂದು ಮಹಾಸರ್ಪ. ಸರ್ಪವು ಆಶೆಯ ಸಂಕೇತ. ಆದ್ದರಿಂದಲೇ ಭೂಮಿಯಲ್ಲಿ ನಿಧಿಯಿದ್ದಲ್ಲೆಲ್ಲ ಸರ್ಪದ ವಾಸ್ತವ್ಯ. ಆಶೆಯ ಮೇಲೆಯೇ ಜಗತ್ತು ನಿಂತಿದೆ. ಸ್ಥಿತಿತತ್ವದ ಅಧಿದೇವ ವಿಷ್ಣು. ಜಗತ್ತಿನ ಸ್ಥಿತಿಗೆ ಆಶೆಯೇ ಬೆನ್ನೆಲುಬು. ವಿದ್ಯೆ-ವಿವಾಹ-ಸಂತಾನ-ಐಶ್ವರ್ಯ ಮುಂತಾದ ಸಮೃದ್ಧಿಗಳ ಸಾಲು-ಸಾಲು ಆಶಾವಾದಿತ್ವದ ಮೇಲೆಯೇ ವಿರಾಜಿಸುವುದು. ಅನೇಕಾರ್ಥಗಳ ಈ ಆದಿಶೇಷನೇ ಶ್ಲೇಷತತ್ವದ ಅಭಿಮಾನಿದೇವನೆಂದು ಶ್ಲೇಷಸಿದ್ಧಾಂತದಲ್ಲಿ ನಿರೂಪಿಸಲಾಗಿದೆ.

ಈ ಶ್ಲೇಷಸಿದ್ಧಾಂತಸಾಧಕನು ಕಾವ್ಯಾದಿಸಾಹಿತ್ಯಕ್ಷೇತ್ರದ ಮೂಲಕವೇ ಶ್ಲೇಷತತ್ವದ ಆತ್ಮಪ್ರತಿಪಾದನೆಯನ್ನು ಪ್ರಸ್ಥಾಪಿಸಲು ಹೊರಡಲು ಕಾರಣ ಪ್ರಾಚೀನ ಸಿದ್ಧಾಂತಿಗಳೆಲ್ಲ ಈ ಮೂಲಕವೇ ತಮ್ಮ ಸಿದ್ಧಾಂತಗಳನ್ನು ಪ್ರತಿಪಾದಿಸಿದ್ದು. ನಾಟ್ಯಶಾಸ್ತ್ರಕಾರನಾದ ಭರತನ ಕಾಲದಿಂದಲೂ ಕಾವ್ಯ-ನಾಟಕಾದಿ ಸರ್ವಕಲಾಪ್ರಪಂಚದಲ್ಲಿ ರಸಪ್ರಧಾನತೆ ಅಸ್ತಿತ್ವಕ್ಕೆ ಬಂದದ್ದು ಗೋಚರಿಸುತ್ತದೆ. "ಭಾವ-ವಿಭಾವ-ಅನುಭಾವಸಂಯೋಗಾತ್ ರಸನಿಷ್ಪತ್ತಿ:" ಎಂದು ಹೇಳುವ ಭರತನು ಪಾತ್ರಗಳಲ್ಲಿ ಅಭಿನಯಗಳ ಮೂಲಕ ಹೊರಹೊಮ್ಮುವ ರತಿ-ಹಾಸ-ಶೋಕ-ಉತ್ಸಾಹ-ಕ್ರೋಧಾದಿ

ಭಾವಗಳಿಂದ ಉದ್ಭೂತವಾಗುವ ಶೃಂಗಾರ-ಹಾಸ್ಯ ಮುಂತಾದ ನವರಸಗಳು ಅಭಿವ್ಯಕ್ತಗೊಂಡು ಸಹೃದಯನನ್ನು ವ್ಯಾಪಿಸುವಿಕೆಯೇ ಕಾವ್ಯ-ನಾಟಕಾದಿಸಾಹಿತ್ಯದ ಹಾಗೂ ನೃತ್ಯಾದಿ ಕಲೆಗಳ ಗುರಿಯೆಂದು ಸಾಧಿಸಿದ್ದಾನೆ. ವಾಕ್ಯಗಳು ಉಪಮಾದಿ ಅಲಂಕಾರಗಳಿಂದೊಡಗೂಡಿದಾಗ ಮಾತ್ರ ಸಹೃದಯಸಂವೇದ್ಯವೆಂದು ಭಾಮಹ-ದಂಡಿ ಮುಂತಾದವರು ಗುರುತಿಸಿದರೆ, ಎಂಟನೆಯ ಶತಮಾನದಲ್ಲಿ ಆಗಿ ಹೋದ ವಾಮನನು ರೀತಿಯೇ ಆತ್ಮವೆಂದು ಸಾಧಿಸುತ್ತಾನೆ. ಮುಂದೆ ಒಂಬತ್ತನೆಯ ಶತಮಾನದಲ್ಲಿ ಬರುವ ಆನಂದವರ್ಧನನು ಸಹೃದಯನಲ್ಲಿ ಪ್ರತಿಧ್ವನಿಸುವ ವ್ಯಂಗ್ಯಾರ್ಥವೇ, ಅರ್ಥಾತ್, ಧ್ವನ್ಯರ್ಥವೇ ಕಾವ್ಯದ ಆತ್ಮವೆಂದು ಸಾರುತ್ತಾನೆ. ಈತನ ಧ್ವನಿವಾದವು ಮುಂದಿನ ಅಲಂಕಾರಶಾಸ್ತ್ರಜ್ಞರಿಗೆ, ಅಂದರೆ, ಕಾವ್ಯಶಾಸ್ತ್ರಜ್ಞರಿಗೆ ಎಷ್ಟರ ಮಟ್ಟಿಗೆ ಅಪ್ಯಾಯಮಾನವೆನಿಸಿತೆಂದರೆ ಇನ್ನೂ ಮುಂದೆ ಬಂದ ಕುಂತಕನು ವಕ್ರೋಕ್ತಿಯೇ ಕಾವ್ಯದ ಆತ್ಮವೆಂದು ಪ್ರತಿಷ್ಠಾಪಿಸಲು ಹೊರಟದ್ದಕ್ಕೆ ಹೇಳಿಕೊಳ್ಳುವ ಸಂಖ್ಯೆಯ ಅನುಯಾಯಿಗಳದೇ ಕೊರತೆಯುಂಟಾಗುತ್ತದೆ.

ಈ ಮೇಲಿನ ಎಲ್ಲ ಸಂದರ್ಭಗಳಲ್ಲಿ ಶಬ್ದಾರ್ಥಗಳು ಒಂದನ್ನೊಂದು ಹೊಂದಿಕೊಂಡು ಹೋಗುವ ಗುಣವನ್ನು ಶ್ಲೇಷಗುಣವೆಂದೂ ಒಂದಕ್ಕಿಂತ ಹೆಚ್ಚಿನ ಅರ್ಥವಿದ್ದಲ್ಲೆಲ್ಲ ಶ್ಲೇಷಾಲಂಕಾರವೆಂದೂ ಪೂರ್ವಸೂರಿಗಳು ಕರೆದರು. ಪ್ರಾಚೀನಕಾಲದ ಭರತಮುನಿಯಿಂದ ಅರ್ವಾಚೀನಕಾಲದವರೆಗೂ ಇದು ನಡೆದು ಬಂದಿತು. ಆದರೆ ಈ ಶ್ಲೇಷಸಿದ್ಧಾಂತಕಾರನು ಶ್ಲೇಷತತ್ವದ ಆ ಎರಡು ವಿಧಗಳಿಗೆ ಆತ್ಮರೂಪದ ನಾಲ್ಕು ನೂತನ ವಿಭಾಗಗಳನ್ನು ಹೆಸರಿಸಿ ಶ್ಲೇಷತತ್ವವೇ ಸಾಹಿತ್ಯಾದಿಗಳ ಆತ್ಮವೆಂದು ಉದ್ಘೋಷಿಸುವುದು ಮಾತ್ರವಲ್ಲದೆ ವಿಪುಲ ಉದಾಹರಣೆಗಳೊಂದಿಗೆ ಸಮರ್ಥವಾಗಿ ಅದನ್ನು ಪ್ರಾಚೀನ ಕ್ರಮದಲ್ಲಿ ಕಾರಿಕಾ-ವೃತ್ತಿಗಳೊಂದಿಗೆ ಪ್ರತಿಪಾದಿಸುತ್ತಾನೆ. ವೃತ್ತ್ಯನೇಕತ್ವಸೂಚಕಶ್ಲೇಷ, ಪ್ರಬಂಧಶ್ಲೇಷ, ಅವಸ್ಥಾಶ್ಲೇಷ ಮತ್ತು ಪ್ರತೀಕಶ್ಲೇಷಗಳೇ ಆ ನಾಲ್ಕು ನೂತನ ವಿಧಗಳು ಅಥವಾ ವಿಭಾಗಗಳು. ಇದಕ್ಕಾಗಿ ಶ್ಲೇಷಸಿದ್ಧಾಂತದಲ್ಲಿ ಎಂಟು ಅಧ್ಯಾಯಗಳನ್ನು ತರಲಾಗಿದೆ. ಮಂಗಲಾಚರಣ, ಶ್ಲೇಷಸಿದ್ಧಾಂತಮಂಡನ, ಅಲಂಕಾರಶ್ಲೇಷ, ವೃತ್ತ್ಯನೇಕತ್ವಸೂಚಕಶ್ಲೇಷ, ಪ್ರಬಂಧಶ್ಲೇಷ, ಅವಸ್ಥಾಶ್ಲೇಷ, ಪ್ರತೀಕಶ್ಲೇಷ ಮತ್ತು ಉಪಸಂಹಾರ ಎಂಬ ಹೆಸರುಗಳ ಎಂಟು ಅಧ್ಯಾಯಗಳಲ್ಲಿ ಬರೆಯಲ್ಪಟ್ಟ ಸಂಸ್ಕೃತಶ್ಲೇಷಸಿದ್ಧಾಂತವು ಈ ಸಿದ್ಧಾಂತಿಯದೇ ಆಂಗ್ಲಾನುವಾದದೊಂದಿಗೆ

೯೯೮ರಲ್ಲಿ ಶಿವಮೊಗ್ಗೆಯ ಮಲ್ನಾಡ್ ರಿಸರ್ಚ್ ಅಕಾಡೆಮಿಯಿಂದ ಪ್ರಕಟಗೊಂಡಿತು.

ವ್ಯಂಗ್ಯಾರ್ಥವೆಂದು ಕರೆಯಲ್ಪಡುವ ಧ್ವನ್ಯರ್ಥವು ಮಾತ್ರ ಸಹೃದಯನಲ್ಲಿ ರಸಾನುಭೂತಿಯನ್ನು ಉಂಟುಮಾಡುತ್ತದೆ ಅನ್ನುವುದು ಧ್ವನಿವಾದದ ತಿರುಳು. ಹೀಗೆ ವ್ಯಂಗ್ಯಾರ್ಥವು ಬರುವಾಗ ಶಬ್ದ-ವಾಕ್ಯಗಳ ವಾಚ್ಯಾರ್ಥ ಅಥವಾ ಅಭಿಧಾರ್ಥವು ಇದ್ದೇ ಇರುತ್ತದೆ; ಕೆಲವು ಸಲ ಲಕ್ಷ್ಯಾರ್ಥವೂ ಬರುವುದುಂಟು. ಇದಕ್ಕೆ ಕನ್ನಡದ್ದೇ ಒಂದು ವಾಕ್ಯವನ್ನು, ಉದಾಹರಣೆಗೆ, ರನ್ನನ **ಗದಾಯುದ್ಧ**ದಲ್ಲಿ ಬರುವ "ನೀರೊಳಗಿರ್ದುಂ ಬೆಮರ್ದನುರಗಪತಾಕಂ" ಅನ್ನುವುದನ್ನು, ನೋಡಬಹುದು. ದುರ್ಯೋಧನನು ನೀರೊಳಗಿದ್ದೂ ಬೆವರಿದ ಅನ್ನುವುದು ವಾಚ್ಯಾರ್ಥವಾದರೆ ಇದರ ಜೊತೆಯಲ್ಲಿಯೇ ಬೆವರಲು ಕಾರಣ ಭಯಂಕರ ಹೆದರಿಕೆ ಅನ್ನುವುದೂ ಆ ಹೆದರಿಕೆಗೆ ಕಾರಣವಾದ ಭೀಮನ ಶೌರ್ಯ-ಕ್ರೌರ್ಯಾದಿಗಳೂ ಕೂಡಲೇ ಧ್ವನಿಸುತ್ತವೆ. ಹೀಗೆ ವಾಚ್ಯಾರ್ಥ-ಧ್ವನ್ಯರ್ಥಗಳೆರಡರ ಸಮಾವೇಶವೂ, ಸಮ-ಸಮಪ್ರವೇಶವೂ ಸಹೃದಯನಲ್ಲಿ ಒಮ್ಮೆಲೇ ಘಟಿಸುವುದರಿಂದ ಇಲ್ಲಿ ವಾಚ್ಯವೃತ್ತಿ-ಧ್ವನಿವೃತ್ತಿಗಳೆಂಬ ವೃತ್ತ್ಯನೇಕತ್ವಶ್ಲೇಷವುಂಟಾಗಿ, ಈ ಶ್ಲೇಷವೇ ಅಲ್ಲಿಯ ಆತ್ಮವಾಗಿ ಪರಿಣಮಿಸುವುದು ಅನ್ನುವುದು ಇಲ್ಲಿಯ ವಿವರಣೆ. ಅಂದರೆ ಇಲ್ಲಿ ಧ್ವನಿಯನ್ನಾಗಲೀ ವಕ್ರೋಕ್ತಿಯನ್ನಾಗಲೀ ರಸವನ್ನಾಗಲೀ ಅಲಂಕಾರವನ್ನಾಗಲೀ ಅಲ್ಲಗಳೆಯಲಾಗುವುದಿಲ್ಲ; ಆದರೆ ಅವೆಲ್ಲವೂ ವೃತ್ತ್ಯನೇಕತ್ವಸೂಚಕಶ್ಲೇಷದಲ್ಲಿ ಅಂತರ್ಗತವಾಗುತ್ತವೆ ಅನ್ನುವುದು ಇಲ್ಲಿಯ ಸಿದ್ಧಾಂತ.

ಇಪ್ಪತ್ತನೆಯ ಶತಮಾನದವರೆಗೂ ಕಾವ್ಯಶಾಸ್ತ್ರಜ್ಞರು ಅಥವಾ ಅಲಂಕಾರಶಾಸ್ತ್ರದ ಸಿದ್ಧಾಂತಿಗಳು ವೇದಗಳ ಗೊಡವೆಗೇ ಹೋದದ್ದಿಲ್ಲ. ಅವು ಅಪೌರುಷೇಯಗಳೆಂದು ಅವನ್ನು ತಮ್ಮ ಸಿದ್ಧಾಂತಗಳ ಪರಿಧಿಯಲ್ಲಿ ಚರ್ಚಿಸಲೇ ಇಲ್ಲ. ಆದರೆ ಇಲ್ಲಿ ವೇದಗಳನ್ನೂ ತರಲಾಗಿದೆ. ಪ್ರಬಂಧಶ್ಲೇಷದ ಅಡಿಯಲ್ಲಿ ಋಷಿ-ಮಂತ್ರ-ದೇವತೆಗಳಲ್ಲೆಲ್ಲ ಪ್ರತ್ಯೇಕ ಪ್ರಬಂಧಗಳೇ ಶ್ಲೇಷಾತ್ಮಕವಾಗಿ ಹೇಗೆ ಕಂಡುಬರುತ್ತವೆ ಅನ್ನುವುದನ್ನು ಸುದೀರ್ಘವಾಗಿ ವಿವರಿಸಲಾಗಿದೆ. ಉದಾಹರಣೆಗೆ ಇಂದ್ರ ; ಈತ ಈ ಶಬ್ದದಲ್ಲಿಯ ಅಕ್ಷರಗಳ ಮೂಲಕ ಮತ್ತು ಈತನನ್ನು ಕುರಿತು ಬರುವ ಅನೇಕಾನೇಕ ಸೂಕ್ತ-ಮಂತ್ರಗಳ ಮೂಲಕ ಪ್ರತಿಜೀವಿಯಲ್ಲಿಯ ಹೃದಯವೂ ಆಗುತ್ತಾನೆ,

ಪಿಟ್ಯೂಟರಿಗ್ಲ್ಯಾಂಡ್ ಎಂಬ ಚೋದಕೋತ್ಪಾದನಗ್ರಂಥಿಯೂ ಆಗುತ್ತಾನೆ. ಆಧ್ಯಾತ್ಮಿಕವಾಗಿ ಪರಬ್ರಹ್ಮನೇ ಆಗಿ ನಿಲ್ಲುವ ಈತ ಪ್ರಕೃತಿಗೆ ಸಂಬಂಧಿಸಿದಂತೆ ವೃಷ್ಟ್ಯಧಿದೇವತೆಯಾಗಿ ನಿಲ್ಲುತ್ತಾನೆ. ಇಂದ್ರನ ಬಗ್ಗೆ ಬರೆಯಲ್ಪಟ್ಟ ಐದು ಪುಟಗಳನ್ನು ಒಂದು ಪ್ರಬಂಧವಾಗಿ ೧೯೯೩ರಲ್ಲಿ, ಪೂನಾದಲ್ಲಿ ನಡೆದ ಅಖಿಲಭಾರತಪ್ರಾಚ್ಯಮಹಾಧಿವೇಶನದಲ್ಲಿ, ಪಂಡಿತಪರಿಷತ್ತಿನಲ್ಲಿ ನಾನು ಮಂಡಿಸಿದಾಗ ಅಲ್ಲಿ ಮಂಡಿಸಲ್ಪಟ್ಟ ನೂರಾರು ಪ್ರಬಂಧಗಳಲ್ಲಿ ಅತ್ಯುತ್ತಮ ಪ್ರಬಂಧವೆಂದು ಪರಿಗಣಿಸಲ್ಪಟ್ಟು **"ಪಂಡಿತಪರಿಷತ್ ಅವಾರ್ಡ್"** ಈ ಪ್ರಬಂಧಕ್ಕೆ ಲಭಿಸಿದ್ದನ್ನು ಇಲ್ಲಿ ಸ್ಮರಿಸುವುದು ಸೂಕ್ತ. ರಾಮಾಯಣ-ಭಾರತ-ಪುರಾಣಾದಿಗಳು ಮೇಲ್ನೋಟಕ್ಕೆ ಇತಿಹಾಸವೆನಿಸಿದರೆ, ಕಥೆಯೆನಿಸಿದರೆ, ಒಳಗೆ, ಅಂತರಂಗದಲ್ಲಿ, ಅಲ್ಲಿಯ ಪ್ರತಿಯೊಂದು ಪಾತ್ರ, ಸ್ಥಳ, ಪಾತ್ರದಲ್ಲಿಯ ಹೆಸರುಗಳ ಅಕ್ಷರಗಳು ಇವೆಲ್ಲ ಜೀವಾತ್ಮದ ಗತಿ-ಸ್ಥಿತಿಗಳನ್ನು ಗರ್ಭಗತ ಭ್ರೂಣತ್ವದಿಂದ ಮೋಕ್ಷಪರ್ಯಂತ ಹೇಗೆ ನಡೆಸಿಕೊಂಡು ಬರುತ್ತವೆ ಅನ್ನುವುದನ್ನು ಬೋಧಿಸುತ್ತವೆ. ಉದಾಹರಣೆಗೆಂದು ರಾಮನೆಂದರೆ ಜನನ-ಮರಣಚಕ್ರದಲ್ಲಿ ಸಿಲುಕಿಕೊಂಡ ಜೀವಾತ್ಮ ಹಾಗೂ ಸೀತೆಯೆಂದರೆ ಜೀವಾತ್ಮದ ಶಕ್ತಿ ಹಾಗೂ ರಾವಣ-ಕುಂಭಕರ್ಣಾದಿಗಳು ರಜಸ್ತಮೋಗುಣಗಳು ಅನ್ನುವುದೇ ಮುಂತಾದವುಗಳನ್ನೂ ಹಾಗೆಯೇ ಭಾರತದ ಮತ್ತು ಪುರಾಣದ ಕಥೆಗಳನ್ನು ಈ ಪ್ರಬಂಧಶ್ಲೇಷವೆಂಬ ಅಧ್ಯಾಯದಲ್ಲಿ ಎಳೆ-ಎಳೆಯಾಗಿ ಬಿಡಿಸುತ್ತಾ ಹೋಗಲಾಗಿದೆ. ಹೀಗೆ ಪ್ರಬಂಧದುದ್ದಕ್ಕೂ ಹೋಗುವ ಅರ್ಥಬಹುಲತ್ವದಿಂದಾಗಿ ಶ್ಲೇಷತತ್ವವೇ ಈ ಎಲ್ಲ ಕೃತಿಗಳ ಆತ್ಮವೆಂದು ಇಲ್ಲಿ ಸಾಧಿಸಲಾಗಿದೆ. ಒಳಿತು ಕೆಡುಕುಗಳೆಂಬ ಪರಿಣಾಮದ್ವಯವನ್ನು ಕಥೆ-ಕಾದಂಬರಿ-ನಾಟಕಾದಿಗಳು ಧ್ವನಿಸುವುದನ್ನು ಸಾಮಾನ್ಯವಾಗಿ ಕಾಣಬಹುದೆನ್ನುವುದನ್ನೂ ಇಲ್ಲಿ ವಿವರಿಸಲಾಗಿದೆ.

ಮನಶ್ಶಾಸ್ತ್ರದ ಪರಿಧಿಯಲ್ಲಿ ಅವಸ್ಥಾಶ್ಲೇಷವನ್ನು ತರಲಾಗಿದೆ. ರಾಮಾಯಣದಲ್ಲಿ ಮಾರೀಚನ ಆಕ್ರಂದನ, ಪುರಾಣಗಳಲ್ಲಿ ಜಯವಿಜಯರ ಕಥೆ, ಗಣಪತಿಯ ಕಥೆ ಹಾಗೂ ಕಾವ್ಯಗಳಲ್ಲಿ ಶಕುಂತಲೆಯ ಅನ್ಯಮನಸ್ಕತೆ ಮುಂತಾದವುಗಳು ಹೇಗೆ ಅರ್ಥದ್ವಯವನ್ನುಂಟುಮಾಡಿ ಮುಂದಿನ ಕಥೆಯ ಓಘಕ್ಕೆ ಕಾರಣೀಭೂತವಾದವು ಅನ್ನುವುದನ್ನು ಇಲ್ಲಿ ವಿವರಿಸಲಾಗಿದೆ. ಯಾವುದೇ ಲಾಂಛನ, ದೇವಾನುದೇವತೆಗಳ ಆಯುಧ, ಮೂರ್ತಿ ಮುಂತಾದವುಗಳೆಲ್ಲ ಹೇಗೆ ವಿವಿಧಾರ್ಥಗಳಿಗೆ ಪ್ರತೀಕಗಳಾಗುತ್ತವೆ ಅನ್ನುವುದನ್ನು ಪ್ರತೀಕಶ್ಲೇಷವೆಂಬ ಅಧ್ಯಾಯದಲ್ಲಿ ತರಲಾಗಿದೆ.

ಗಾಂಧೀ ಮನೆತನ : ಕೆಲ ಒಳನೋಟಗಳು

– ಎಸ್.ಜಿ.ಸೀತಾರಾಮ್

ನದಿಮೂಲ, ಋಷಿಮೂಲ ಹುಡುಕಬಾರದೆಂಬ ರೀತಿನೀತಿಯ ಕಾರಣದಿಂದಲೋ ಏನೋ, ಒಟ್ಟಲ್ಲಿ "ಗಾಂಧೀ" ಎಂದೊಡನೆ ಇಂದು ಜನಮಾನಸದಲ್ಲಿ ಮೂಡುವುದು ಮೋಹನ್‌ದಾಸ್ ಕರಮ್‌ಚಂದ್ ಗಾಂಧೀ ಅವರ ಚಿತ್ರವೇ ಹೊರತು, ಅದೇ ವಿಖ್ಯಾತ ನಾಮದ ಮತ್ಯಾವ ಬಿಂಬವೂ ಅಲ್ಲ. ಆದರೆ, "ಗಾಂಧೀ" ನಾಮದ ಮೂಲವನ್ನೇನಾದರೂ ಆಸಕ್ತಿಯಿಂದ ಕೆದಕಲು ಹೊರಟರೆ, ಬಹಳಷ್ಟು ಸ್ವಾರಸ್ಯಕರ ಸಂಗತಿಗಳು ಹೊರಬೀಳುತ್ತವೆ. "ಗಾಂಧೀ" ಎಂಬುವ ಪದ "ಗಂಧ" ಎಂಬ ಶಬ್ದದಿಂದ ಬಂದಿದ್ದು, ಗಂಧದ ವ್ಯಾಪಾರಿಗಳನ್ನು ಹೀಗೆ ಕರೆಯುತ್ತಿದ್ದರೆಂಬುದನ್ನು ತಿಳಿದು ಶುರುವಿನಲ್ಲೇ ಅಚ್ಚರಿಯಾಗುತ್ತದೆ. ಹಾಗೆಯೇ ಮುಂದುವರಿದರೆ, "ಗಾಂಧೀ"ಗೆ ಮುಂಚೆಯೇ ಇನ್ನೊಬ್ಬ ವಿಶ್ವವಿಖ್ಯಾತ "ಗಾಂಧೀ" ಇದ್ದರೆಂದು ತಿಳಿದು ಕುತೂಹಲ ಮತ್ತಷ್ಟು ಕೆರಳುತ್ತದೆ. ಇವರೇ ವೀರ್‌ಚಂದ್ ರಾಘವ್‌ಜೀ ಗಾಂಧೀ (೧೮೮೪–೧೯೦೧). ಇವರು ಬ್ಯಾರಿಸ್ಟರ್ ಮತ್ತು ಬಹುಧರ್ಮ ವಿದ್ವಾಂಸರು, ಮತ್ತು ಅಮೆರಿಕಾಗೆ ಭೇಟಿಕೊಟ್ಟ (೧೮೯೩) ಮೊತ್ತಮೊದಲ ಗುಜರಾತಿ. ಸ್ವಾಮಿ ವಿವೇಕಾನಂದರು ಇತಿಹಾಸ ಪ್ರಸಿದ್ಧವಾಗಿಸಿದ ೧೮೯೩ರ ವಿಶ್ವ ಧರ್ಮಗಳ ಪಾರ್ಲಿಮೆಂಟ್‌ನಲ್ಲಿ ವೀರ್‌ಚಂದ್ ಗಾಂಧೀ ಅವರು ಜೈನ ಧರ್ಮದ ಪ್ರತಿನಿಧಿಯಾಗಿ ಮನಮೋಹಕ ಉಪನ್ಯಾಸವನ್ನು ನೀಡಿದರು, ಮತ್ತು ಅಮೆರಿಕಾ, ಯೂರೋಪ್‌ಗಳಲ್ಲಿ ೫೦೦ಕ್ಕೂ ಹೆಚ್ಚು ಸಭೆಗಳಲ್ಲಿ ಭಾಷಣ ಮಾಡಿದರು. ಇವರ ಪ್ರಭಾವದಿಂದಾಗಿ ಷಿಕಾಗೋದ ಶ್ರೀ ಮತ್ತು ಶ್ರೀಮತಿ ಹವರ್ಡ್ ಅಮೆರಿಕಾದ ಪ್ರಥಮ ಜೈನ ಮತಾಂತರಿಗಳಾದರು.

ಇದೇ ಶೋಧದಲ್ಲಿ ಮೋಹನ್‌ದಾಸ್ ಗಾಂಧೀ ಅವರ ಕುಟುಂಬದೆಡೆಗೇ ಹೊರಳಿದರಂತೂ, ಆ ಸುತ್ತಲಲ್ಲೇ ಇದ್ದ ಅನೇಕ ಅಜ್ಞಾತ ಗಾಂಧೀ–ನಾಮಧಾರಿಗಳು ಥಟ್ಟನೆ ಪ್ರತ್ಯಕ್ಷರಾಗಿ, "ಏನೀ ಇತಿಹಾಸದ ಮಾಯೆ!" ಎನಿಸುತ್ತದೆ. ಇವರಲ್ಲಿ ಮುಂಚೆಯೇ ಕಾಣಸಿಗುವವರು ಮೋಹನ್‌ದಾಸ್ ಗಾಂಧೀ ಅವರ ಅಕ್ಕ "ರಲಿಯತ್" (ಜನನ: ೧೮೬೨), ಅನಂತರ ಅವರ ಇಬ್ಬರು ಅಣ್ಣಂದಿರಾದ "ಲಕ್ಷ್ಮೀದಾಸ್" (ಜನನ: ೧೮೬೩) ಮತ್ತು "ಕರ್ಸನ್ (ಕೃಷ್ಣ) ದಾಸ್" (ಜನನ: ೧೮೬೭). ಮೋಹನ್‌ದಾಸ್‌ರ ತಂದೆ ದಿವಾನ್ ಕರಮ್‌ಚಂದ್ ಉತ್ತಮ್‌ಚಂದ್ ಗಾಂಧೀ ("ಕಾಬಾ" ಗಾಂಧೀ) ಅವರಿಗೆ, ಪುತಲೀ ಬಾಯಿ ಅವರು ನಾಲ್ಕನೆಯ ಪತ್ನಿಯಾಗಿದ್ದರು. ಅವರ ಮೊದಲಿನ ಮೂವರು ಪತ್ನಿಯರಲ್ಲಿ ಇಬ್ಬರಿಗೆ ಮಾತ್ರ ಮಕ್ಕಳಾಗಿತ್ತು: ಒಬ್ಬರಿಗೆ "ಮುಲೀ" ಎಂಬ ಹೆಣ್ಣುಮಗು, ಇನ್ನೊಬ್ಬರಿಗೆ "ಪನ್‌ಕುನ್ವರ್" ಎಂಬ ಹೆಣ್ಣುಮಗು. ಹೀಗಾಗಿ ಮೋಹನ್‌ದಾಸ್‌ರಿಗೆ ಇಬ್ಬರು ಬಲ–ಅಕ್ಕಂದಿರಿದ್ದರು. ಒಟ್ಟಲ್ಲಿ ಮೋಹನ್‌ದಾಸ್‌ರು ಕಡೆಯ ಮಗುವಾಗಿ, ಕುಟುಂಬದ ವಿಶೇಷ ಪ್ರೀತಿಗೆ ಪಾತ್ರರಾಗಿದ್ದರು; ಎಲ್ಲರೂ

ಅವರನ್ನು "ಮೋನಿಯಾ" ಎಂದೇ ಕರೆಯುತ್ತಿದ್ದರು.

ಮುಂದೆ, ರಲಿಯತ್ ಅವರ ಪತಿ ರಾಜ್‌ಕೋಟ್‌ನಲ್ಲಿ ಚಿಕ್ಕ ವಯಸ್ಸಿನಲ್ಲೇ ಮೃತರಾದ ಮೇಲೆ, ಅವರ ಒಬ್ಬನೇ ಮಗ ೧೦ ವರ್ಷದ ಗೋಕುಲ್‌ದಾಸ್‌ನನ್ನು ಮೋಹನ್‌ದಾಸ್‌ರು ದಕ್ಷಿಣ ಆಫ್ರಿಕಾಕ್ಕೆ ತಮ್ಮ ಎರಡು ಗಂಡುಮಕ್ಕಳೊಡನೆ ಕರೆದೊಯ್ದರು. ಮತ್ತು ಅಣ್ಣ ಲಕ್ಷ್ಮೀದಾಸ್‌ರು ಮೋಹನ್‌ದಾಸ್‌ರನ್ನು ಇಂಗ್ಲೆಂಡ್‌ಗೆ ಕಳುಹಿಸಲು ಹಾಗೂ ವಕೀಲರನ್ನಾಗಿಸಲು ಮುಖ್ಯ ಕಾರಣರಾದರು. ಆದರೆ, ಕಾಲಾಂತರದಲ್ಲಿ, ಕುಟುಂಬ ನಿರ್ವಹಣೆಯ ವಿಚಾರದಲ್ಲಿ ಲಕ್ಷೀದಾಸ್-ಮೋಹನ್‌ದಾಸ್‌ರ ನಡುವೆ ಮನಸ್ತಾಪ ಬಂದು, ಲಕ್ಷೀದಾಸ್‌ರ ಅಂತ್ಯಕಾಲದಲ್ಲಷ್ಟೆ ಈ ಸೋದರರ ನಡುವೆ ಸಂಧಾನವಾಯಿತು.

ಇನ್ನು ಕಸ್ತೂರ್‌ಬಾ ಅವರ ಬಾಲ್ಯದತ್ತ ತಿರುಗಿದರೆ, ಅವರ ತಂದೆ ಗೋಕುಲ್‌ದಾಸ್ ಮಕನ್‌ಜಿ ಕಪಾಡಿಯಾ ಅವರು ಪೋರ್‌ಬಂದರ್‌ನಲ್ಲಿ ಶ್ರೀಮಂತ ಬನಿಯಾ ವರ್ತಕರಾಗಿದ್ದರು. ಕಸ್ತೂರ್‌ಬಾ ಅವರು ಮೋಹನ್‌ದಾಸ್‌ರಿಗಿಂತ ಆರು ತಿಂಗಳು ದೊಡ್ಡವರಾಗಿದ್ದರು (ಜನನ: ೧೦ ಏಪ್ರಿಲ್ ೧೮೬೯) ಮತ್ತು ಇಬ್ಬರಿಗೂ ಸುಮಾರು ಏಳು ವರ್ಷ ವಯಸ್ಸಾಗಿರುವಾಗಲೇ ವಿವಾಹ ನಿಶ್ಚಿತಾರ್ಥವಾಗಿತ್ತು. ಇದಕ್ಕೆ ಮುಂಚೆ ಮೋಹನ್‌ದಾಸ್‌ರಿಗೆ ಇನ್ನಿಬ್ಬರು ಪುಟ್ಟ ಹುಡುಗಿಯರೊಡನೆ ವಿವಾಹ ನಿಶ್ಚಯವಾಗಿದ್ದರೂ, ಆ ಇಬ್ಬರೂ ವಿವಾಹಕ್ಕೆ ಮುಂಚೆಯೇ ತೀರಿಕೊಂಡಿದ್ದರು. ಮೋಹನ್‌ದಾಸ್-ಕಸ್ತೂರ್‌ಬಾ ವಿವಾಹವು ಮೇ ೧೮೮೨ರಲ್ಲಿ (ಅಂದರೆ ಇಬ್ಬರಿಗೂ ಸುಮಾರು ೧೩ ವರ್ಷ ವಯಸ್ಸಾಗಿರುವಾಗ) ಅಣ್ಣ ಕರ್ಸನ್‌ದಾಸ್‌ರ ಮತ್ತು ಒಬ್ಬ ಸೋದರಸಂಬಂಧಿಯ ವಿವಾಹಗಳೊಟ್ಟಿಗೆ ಪೋರ್‌ಬಂದರ್‌ನಲ್ಲಿ ಜರುಗಿತು.

ತರುವಾಯ, ಮೋಹನ್‌ದಾಸ್-ಕಸ್ತೂರಬಾ ದಂಪತಿಗಳಿಗೆ ಹರಿಲಾಲ್ (೧೮೮೮-೧೯೪೮), ಮಣಿಲಾಲ್ (೧೮೯೨-೧೯೫೬), ರಾಮ್‌ದಾಸ್ (೧೮೯೭-೧೯೬೯) ಮತ್ತು ದೇವ್‌ದಾಸ್ (೧೯೦೦-೧೯೫೭) ಎಂಬ ನಾಲ್ಕು ಗಂಡು ಮಕ್ಕಳಾದರು. ಇಸ್ಲಾಂಗೆ ಪರಿವರ್ತಿತರಾಗಿ, ಬಳಿಕ ಹಿಂದೂ ಧರ್ಮಕ್ಕೇ ಮರಳಿ, ಹಲವಾರು ವ್ಯಸನಗಳಿಗೀಡಾಗಿ, ತಂದೆಯ ಅಂತ್ಯಕ್ರಿಯೆಗೂ ಅನರ್ಹರೆಂದೆನಿಕೊಂಡು, ಕಡೆಗೆ ಮುಂಬೈನ ಮುನಿಸಿಪಲ್ ಆಸ್ಪತ್ರೆಯೊಂದರಲ್ಲಿ ಅನಾಥ ಶವವಾಗಿ ಅಳಿಸಿಹೋದ ಹರಿಲಾಲ್‌ರ ದುರಂತ ಆತ್ಮಕಥನವು ಈಗ ಸಾಕಷ್ಟು ಜನಜನಿತ. ಹರಿಲಾಲ್‌ರ (ಪತ್ನಿ: ಗುಲಾಬ್) ಮಗ ಕಾಂತಿಲಾಲ್ ಮೈಸೂರು ಮೆಡಿಕಲ್ ಕಾಲೇಜಿನಿಂದ ೧೯೩೮ರಲ್ಲಿ ಎಂ.ಬಿ.ಬಿ.ಎಸ್.ಪದವಿ ಪಡೆದು, ಕೊನೆಗೆ ಪುಣೆಯ ಬಳಿ ಬಡರೋಗಿಗಳಿಗಾಗಿ ಒಂದು ಆರೋಗ್ಯಧಾಮವನ್ನು ನಡೆಸಿದರು. ಹರಿಲಾಲ್‌ರ ಹಿರಿಯ ಮಗಳು ರಾಮಿ ಬೆಹ್ನ್ ಎಂಬುವರ ಮಗಳು ನೀಲಂ ಪಾರೀಖ್ "ಗಾಂಧೀಜೀಸ್ ಲಾಸ್ಟ್ ಜೂಅಲ್: ಹರಿಲಾಲ್ ಗಾಂಧೀ" ಎಂಬ ಪುಸ್ತಕವನ್ನು ಬರೆದಿದ್ದಾರೆ.

ಎರಡನೆಯ ಮಗ ಮಣಿಲಾಲ್‌ರು ದಕ್ಷಿಣ ಆಫ್ರಿಕಾದಲ್ಲೇ ಇದ್ದು, ಡರ್ಬಾನ್‌ನ ಫ್ಲೀನಿಕ್ಸ್ ಆಶ್ರಮವನ್ನೂ, "ಇಂಡಿಯನ್ ಒಪೀನ್‌ಯನ್" ಪತ್ರಿಕೆಯನ್ನೂ ನಡೆಸಿದರು, ಮತ್ತು ವರ್ಣಭೇದ ನೀತಿಯ ವಿರುದ್ಧ ಹೋರಾಡಿದರು. ಮಣಿಲಾಲ್‌ರ (ಪತ್ನಿ: ಸುಶೀಲಾ) ಮಗಳು ಸೀತಾ ಎಂಬುವರ ಮಗಳಾದ ಉಮಾ ಧುಪೇಲಿಯಾ ಮೆಸ್ತ್ರೀ ಅವರು "ಗಾಂಧೀಸ್ ಪ್ರಿಸ್ನರ್? ದಿ ಲೈಫ್ಞ್ ಆಫ್ಞ್ ಗಾಂಧೀಸ್ ಸನ್ ಮಣಿಲಾಲ್"

ಎಂಬ ಪುಸ್ತಕವನ್ನು ಬರೆದಿದ್ದಾರೆ. ಮಣಿಲಾಲ್‌ರ ಮಗ ಅರುಣ್ (ಪತ್ನಿ ಸುನಂದಾ ಅವರೊಡನೆ ಬರೆದ "ದ ಫ಼ರ್‌ಗಾಟನ್ ವುಮನ್: ದ ಅನ್‌ಟೋಲ್ಡ್ ಸ್ಟೋರಿ ಆಫ್ ಕಸ್ತೂರ್, ದ ವೈಫ್ ಆಫ್ ಮಹಾತ್ಮಾ ಗಾಂಧೀ," ಇವರ ಅನೇಕ ಪುಸ್ತಕಗಳಲ್ಲೊಂದು) ಮತ್ತು ಅರುಣ್‌ರ ಮಗ ತುಷಾರ್ ("ಲೆಟ್ಸ್ ಕಿಲ್ ಗಾಂಧೀ" ಎಂಬ ಪುಸ್ತಕದ ಲೇಖಕರು, ಮತ್ತು ಕಲಾವಿದರು) ಇಬ್ಬರೂ ಸಕ್ರಿಯ ಸಾಮಾಜಿಕ-ರಾಜಕೀಯ ಹೋರಾಟಗಾರರು. ಮಣಿಲಾಲ್‌ರ ಮಗಳು ಇಳಾ ದಕ್ಷಿಣ ಆಫ್ರಿಕಾದ ಪಾರ್ಲಿಮೆಂಟ್‌ನ ಸದಸ್ಯೆಯಾಗಿದ್ದರು; ಇಳಾ ಅವರ ಮಗ ಕುಶ್ ಯುವವಯಸ್ಸಿನಲ್ಲೇ ವರ್ಣಭೇದ ವಿರುದ್ಧ ಚಳುವಳಿಯಲ್ಲಿ ಹತರಾದರು.

ಮೂರನೆಯ ಮಗ ರಾಮ್‌ದಾಸ್‌ರು ತಂದೆಯೊಡನೆ ಭಾರತದಲ್ಲೇ ಸ್ವಾತಂತ್ರ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ರಾಮ್‌ದಾಸ್‌ರ (ಪತ್ನಿ: ನಿರ್ಮಲಾ) ಮಗಳು ಸುಮಿತ್ರಾ ಕುಲಕರ್ಣಿ ನಿವೃತ್ತ ಐ.ಎ.ಎಸ್. ಅಧಿಕಾರಿ ಮತ್ತು ಮಾಜಿ ರಾಜ್ಯಸಭಾ ಸದಸ್ಯೆ. ಇವರು "ಮಹಾತ್ಮಾ ಗಾಂಧೀ: ಮೇರೇ ಪಿತಾಮಹ್" ಎಂಬ ಪುಸ್ತಕವನ್ನು ಬರೆದಿದ್ದಾರೆ. ಈಗ ಬೆಂಗಳೂರಿನಲ್ಲಿ ನೆಲಸಿದ್ದಾರೆ.

ಕೊನೆಯ ಮಗ ದೇವ್‌ದಾಸ್‌ರು ದಿಲ್ಲಿಯ 'ಹಿಂದೂಸ್ತಾನ್ ಟೈಮ್ಸ್' ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕರಾಗಿದ್ದರು. ಅವರಿಗೆ ರಾಜಾಜಿ ಅವರ ಎರಡನೆಯ ಮಗಳು ಲಕ್ಷ್ಮೀ ಅವರೊಡನೆ ವಿವಾಹವಾಗಿತ್ತು. ದೇವ್‌ದಾಸ್‌ರ ಮಕ್ಕಳಲ್ಲಿ ರಾಜ್‌ಮೋಹನ್ ಗಾಂಧೀ (ಸಂಶೋಧಕ-ಪ್ರಾಧ್ಯಾಪಕರು, ಲೇಖಕರು, ಉಪನ್ಯಾಸಕರು, ರಾಜ್ಯಸಭೆಯ ಮಾಜಿ ಸದಸ್ಯರು, ಮಾನವೀಯ ಸುಧಾರಣೆಗಳ ಸಕ್ರಿಯ ಪ್ರತಿಪಾದಕರು ಮತ್ತು "ಮೋಹನ್‌ದಾಸ್: ಎ ಟ್ರೂ ಸ್ಟೋರಿ ಆಫ್ ಎ ಮ್ಯಾನ್, ಹಿಸ್ ಪೀಪಲ್ ಆ್ಯಂಡ್ ಆ್ಯನ್ ಎಂಪೈರ್" ಎಂಬ ಮಹತ್ವದ ಪುಸ್ತಕದ ಕರ್ತೃ); ಗೋಪಾಲ್‌ಕೃಷ್ಣ ಗಾಂಧೀ (ಭೂತಪೂರ್ವ- ಐ.ಎ.ಎಸ್. ಅಧಿಕಾರಿ, ರಾಯಭಾರಿ, ಪಶ್ಚಿಮ ಬಂಗಾಳದ ರಾಜ್ಯಪಾಲರು, ಮತ್ತು ಸಾಂಸ್ಕೃತಿಕ-ಬೌದ್ಧಿಕ ವಲಯಗಳಲ್ಲಿ ಪ್ರತಿಷ್ಠಿತರು) ಹಾಗೂ ರಾಮ್‌ಚಂದ್ರ ಗಾಂಧೀ (ತತ್ತ್ವಶಾಸ್ತ್ರಜ್ಞರು) ಅವರು ಚಿಂತಕರ ವೇದಿಕೆಗಳಲ್ಲಿ ಗಣ್ಯನಾಮರಾಗಿದ್ದಾರೆ.

ಕಸ್ತೂರ್‌ಬಾ-ಮೋಹನ್‌ದಾಸ್ ಗಾಂಧೀ ವಂಶವೃಕ್ಷದಲ್ಲಿ ಸಾಧಾರಣವಾಗಿ ೧೩ ಮೊಮ್ಮಕ್ಕಳನ್ನು ಮತ್ತು ೨೯ ಮರಿಮಕ್ಕಳನ್ನು ಗುರುತಿಸುತ್ತಾರೆ; ಮರಿಮಕ್ಕಳು ಮತ್ತು ಮರಿಮೊಮ್ಮಕ್ಕಳು ಇಂದು ಜಗದಾದ್ಯಂತ ಚದುರಿದ್ದಾರೆ. ಹೃದ್ರೋಗ, ನೇತ್ರರೋಗ ಮತ್ತು ಮಧುಮೇಹ ತಜ್ಞರು, ವ್ಯಾಯಾಮ-ಚಿಕಿತ್ಸಕರು, ಕಂಪ್ಯೂಟರ್ ತಂತ್ರಜ್ಞರು, ಹಣಕಾಸು ವಿಶೇಷಜ್ಞರು, ಛಾಯಾಗ್ರಾಹಕರು, ಪತ್ರಕರ್ತರು, ಪ್ರೊಫ಼ೆಸರರು, ಗಾಂಧೀ ಸಂಸ್ಥೆಗಳ ನಿರ್ವಾಹಕರು ಇತ್ಯಾದಿ ವಿಧವಿಧ ವೃತ್ತಿಗಳಲ್ಲಿ, ಭಾರತದಲ್ಲಿಯೇ ಅಲ್ಲದೆ, ಯು.ಎಸ್.ಎ, ಕೆನಡ, ದಕ್ಷಿಣ ಆಫ್ರಿಕಾ, ಇಂಗ್ಲೆಂಡ್, ಆಸ್ಟ್ರೇಲಿಯಾ ಮುಂತಾದ ದೇಶಗಳಲ್ಲಿಯೂ ಗಾಂಧೀ ಪೀಳಿಗೆಯ ಸದಸ್ಯರು ಇಂದು ಸೇವೆ ಸಲ್ಲಿಸುತ್ತಿದ್ದಾರೆ.

ಕಡೆಯದಾಗಿ, ಗಾಂಧೀ-ನೆಹ್ರೂ ಸಂಬಂಧದಿಂದಾಗಿ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಒಂದು ವಿನೂತನ "ಗಾಂಧೀಶಕೆ" ಪ್ರಾರಂಭವಾದುದರ ಬಗ್ಗೆ ಯೋಚಿಸುವುದು ಸ್ವಾರಸ್ಯಕರವೆನಿಸಬಹುದು. "ಘಾಂಧೀ" ಅಥವಾ "ಘಾಂಡೀ"

ಎಂದು ಪಾರ್ಸಿ ಜನರಲ್ಲಿ ಸಾಮಾನ್ಯವಾಗಿರುವ ಕುಲನಾಮವನ್ನೇ ಇಂದಿರಾ ಗಾಂಧೀ ಅವರ ಪತಿಯು ಮೊದಲಲ್ಲಿ ಹೊಂದಿದ್ದು, ವಿವಾಹದ ಸಮಯಕ್ಕೆ ಗಾಂಧೀ ಅವರ ಸಲಹೆಯ ಮೇರೆಗೆ ತಮ್ಮ ಹೆಸರನ್ನು "ಫ಼ಿರೋಜ಼್ ಜಹಾಂಗೀರ್ ಗಾಂಧೀ" ಎಂದು ಬದಲಾಯಿಸಿಕೊಂಡರೆನ್ನುತ್ತಾರೆ. ಇದಕ್ಕೆ ಮುಂಚೆ, ಟ್ಯಾಗೋರ್‌ರ ಅಕ್ಕನ ಮಗಳು ಸರಳಾದೇವಿ ಅವರ ಮಗ ದೀಪಕ್ ಚೌಧರಿ ಅವರೊಡನೆ ಇಂದಿರಾ ಗಾಂಧೀ ಅವರ ವಿವಾಹವನ್ನು ಗಾಂಧೀ ಅವರು ನೆಹ್ರೂ ಅವರಲ್ಲಿ ಪ್ರಸ್ತಾಪಿಸಿದ್ದರಂತೆ. ಇದೇನಾದರೂ ನೆರವೇರಿ, ಇಂದಿರಾ ಪ್ರಿಯದರ್ಶಿನಿಗೆ "ಗಾಂಧೀ" ನಾಮದ ಬಲವೇ ದೊರಕದೆ ಹೋಗಿದ್ದರೆ, ಸ್ವತಂತ್ರ ಭಾರತದ ಇತಿಹಾಸವೇ ಬದಲಾಗುತ್ತಿತ್ತೇನೋ!



ಒಂದು ಅಪರೂಪದ ಚಿತ್ರ:
ವಿವೇಕಾನಂದರ ಬಲಕ್ಕೆ ಎರಡನೆಯವರು ವೀರ್‌ಚಂದ್ ಗಾಂಧೀ.

* * *

ಜನಪದ ನಿಲಯದ ಅಂತರಂಗದಲ್ಲಿ.. ೧೧೦

– ಸುರೇಂದ್ರ ಕೌಲಗಿ



ಗಾಂಧೀಜಿಯವರು ರೂಪಿಸಿದ ೧೮ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಮದ್ಯಪಾನ ನಿಷೇಧವೊಂದು. ಸ್ವಾತಂತ್ರ್ಯ ಪೂರ್ವದಲ್ಲಿ ಇದು ತುಂಬಾ ಅತ್ಯಗತ್ಯವಾಗಿದ್ದ ಕಾರ್ಯಕ್ರಮ. ಆಗ ದೇಶ ತೀವ್ರ ಬಡತನದಲ್ಲಿತ್ತು. ಜನರು ಬಡವರಾಗಿದ್ದರು. ವರ್ಷದಲ್ಲಿ ೪ ತಿಂಗಳು ಮಾತ್ರ ಗ್ರಾಮೀಣರು ಕೃಷಿ ಕೆಲಸ ಮಾಡುತ್ತಿದ್ದರು. ಇಂಥ ಕಡುಬಡತನದಲ್ಲಿ ಹೇಗಾದರೂ ಕಷ್ಟಪಟ್ಟು ಸಂಪಾದಿಸುತ್ತಿದ್ದ ಹಣದಲ್ಲಿ ಕೆಲವರು ಮದ್ಯಪಾನ ವ್ಯಸನಕ್ಕೆ ಬಲಿಯಾಗಿ ತುಂಬ ದಯನೀಯ ಜೀವನ ಸಾಗಿಸುತ್ತಿದ್ದರು. ಇದನ್ನು ಮನಗಂಡ ಗಾಂಧೀಯವರು ಸ್ವತಂತ್ರ ಭಾರತದಲ್ಲಿ ಮದ್ಯಪಾನ ಇರಕೂಡದೆಂಬ ತೀರ್ಮಾನಕ್ಕೆ ಬಂದರು. ಜನರಲ್ಲಿ ಮದ್ಯಪಾನದಿಂದ ಆಗುವ ಆರ್ಥಿಕ ಮತ್ತು ಸಾಂಸ್ಕೃತಿಕ ಮತ್ತು ಸಾಮಾಜಿಕ ನಷ್ಟಗಳನ್ನು ತಿಳಿಹೇಳಿ ಅವರು ಮದ್ಯಪಾನ ವ್ಯಸನದಿಂದ ಜನರನ್ನು ದೂರ ಇರಿಸುವುದಕ್ಕಾಗಿ ತಮ್ಮ ಅನುಯಾಯಿಗಳಿಗೆ ಮದ್ಯಪಾನ ನಿಷೇಧದ ಕೆಲಸವನ್ನು ಕೈಗೆತ್ತಿಕೊಳ್ಳಲು ಸಲಹೆಮಾಡಿದರು. ಅದರಂತೆ ನೂರಾರು ಜನ ಸರ್ವೋದಯ ಕಾರ್ಯಕರ್ತರು ಈ ರಚನಾತ್ಮಕ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ತಮ್ಮನ್ನೇನಾದರೂ ಒಂದು ಗಂಟೆ ಮಟ್ಟಿಗೆ ದೇಶದ ಸರ್ವಾಧಿಕಾರಿಯನ್ನಾಗಿ ಮಾಡಿದರೆ ತಾವು ಹೆಂಡದಂಗಡಿಯನ್ನು ಯಾವ ಪರಿಹಾರವಿಲ್ಲದೆ ಮುಚ್ಚುವುದಾಗಿ ಹೇಳಿದರು. ಆದರೆ ಸ್ವತಂತ್ರ ಭಾರತ ಮದ್ಯಪಾನ ನಿಷೇಧವನ್ನು ಮಾಡದೆ ಅದನ್ನೇ ಒಂದು ಸರ್ಕಾರದ ಆದಾಯದ ಮುಖ್ಯ ಮಾರ್ಗವನ್ನಾಗಿ ಮಾಡಿಕೊಂಡಿದೆ. ಇಂದು ದೇಶದೆಲ್ಲೆಡೆಯಲ್ಲೆಲ್ಲಾ ಗುಜರಾತ್ ಒಂದನ್ನು ಬಿಟ್ಟರೆ, ದೇಶದ ಎಲ್ಲೆಲ್ಲಿಯೂ ಮುಕ್ತ ಮದ್ಯಪಾನದ ಅವಕಾಶವಿದೆ. ಆದರೂ ಕೂಡ ಮದ್ಯಪಾನದ ನಿಷೇಧಕ್ಕಾಗಿ ಅಲ್ಲಲ್ಲಿ ಚಳುವಳಿಗಳು ನಡೆಯುತ್ತಲೇ ಇವೆ. ದೇಶದ ಮಟ್ಟದಲ್ಲಿ ಅಖಿಲ ಭಾರತ ನಶಾಬಂದಿ ಕೌನ್ಸಿಲ್ ಕೆಲಸ ಮಾಡುತ್ತಿದೆ. ಕರ್ನಾಟಕದಲ್ಲಿ ಮದ್ಯಪಾನ ಸಂಯಮ ಮಂಡಳಿಯೂ ಇದೆ. ಕೆಲವು ವರ್ಷಗಳ ಹಿಂದೆ ಮೇಲುಕೋಟೆ ಮತ್ತು ಜಕ್ಕನಹಳ್ಳಿ ಸುತ್ತಮುತ್ತಲಿನ ಪ್ರದೇಶದಲ್ಲಿ ಮದ್ಯಪಾನ ವಿರೋಧದ ಚಳುವಳಿ ಮಾಡಲು ಪ್ರಾರಂಭಿಸಲಾಯಿತು. ತಕ್ಕ ಮಟ್ಟಿಗೆ ಜನಸಂಘಟನೆ ಮಾಡಲಾಯಿತು. ಆದರೆ

ಜನರಲ್ಲಿ ಮದ್ಯಪಾನದ ದುಷ್ಪರಿಣಾಮಗಳ ಬಗ್ಗೆ ಇನ್ನೂ ಹೆಚ್ಚಿನ ಜಾಗೃತಿಯನ್ನು ಉಂಟುಮಾಡುವ ಮೊದಲೇ ಕೆಲವು ಕಾರ್ಯಕರ್ತರು ದುಡುಕಿದರು. ಶೈಕ್ಷಣಿಕವಾಗಿ ಜನರಲ್ಲಿ ಹೆಚ್ಚಿನ ಕೆಲಸವಾಗಬೇಕಿತ್ತು. ಬೇರೆ ಬೇರೆ ಜನಾಂಗದ ಮಠಾಧೀಶರನ್ನು ಕೂಡ ಜನಜಾಗೃತಿ ಮಾಡಲು ಉಪಯೋಗಿಸಿಕೊಳ್ಳಬೇಕಿತ್ತು. ಸಹಜವಾಗಿಯೇ ಹೆಣ್ಣುಮಕ್ಕಳು ಈ ಚಳುವಳಿಯ ಮುಂಚೂಣಿಯಲ್ಲಿದ್ದರು. ಗಂಡಂದಿರ ಮದ್ಯಪಾನದಿಂದಾಗಿ ಹೆಚ್ಚು ತೊಂದರೆ ಅನುಭವಿಸುವವರು ಹೆಣ್ಣು ಮಕ್ಕಳೇ. ಹೆಣ್ಣುಮಕ್ಕಳು ಗಂಡಂದಿರ ಅಧೀನವಾಗಿದ್ದುದರಿಂದ ಚಳುವಳಿಯಲ್ಲಿ ಭಾಗವಹಿಸಲು ಹಿಂದೇಟು ಹಾಕುತ್ತಿದ್ದರು. ಚಳುವಳಿಯಲ್ಲಿ ಭಾಗವಹಿಸಲು ಹಿಂದೇಟು ಹಾಕುತ್ತಿದ್ದರು. ಚಳುವಳಿಯನ್ನು ಸೇರಿದರೆ ಮನೆಯಿಂದ ಹೊರಹಾಕುವುದಾಗಿ ಗಂಡಂದಿರು ಹೆಣ್ಣುಮಕ್ಕಳನ್ನು ಬೆದರಿಸುತ್ತಿದ್ದರು. ನಮ್ಮ ಕಾರ್ಯಕರ್ತರು ಹಳ್ಳಿಗಳಿಗೆ ಹೋದಾಗ ಅಲ್ಲಿಯ ಮದ್ಯಪಾನ ವ್ಯಸನಿಗಳು ನಮ್ಮೊಂದಿಗೆ ಜಗಳಕ್ಕೆ ಬರುತ್ತಿದ್ದರು. ನಿಮಗೆ ಮಾಡುವುದಕ್ಕೆ ಕೆಲಸವಿಲ್ಲವೇ ಎಂದು ಕೇಳುತ್ತಿದ್ದರು. ಯಾರ ಏಜೆಂಟರಾಗಿ ಕೆಲಸ ಮಾಡುತ್ತಿದ್ದೀರೆಂದು ಪ್ರಶ್ನಿಸುತ್ತಿದ್ದರು. ಒಂದು ರೀತಿಯಲ್ಲಿ ಅಸಹಕಾರದ ಮನೋಭಾವನೆಯನ್ನು ವ್ಯಕ್ತಪಡಿಸುತ್ತಿದ್ದರು. ಪರಿಸ್ಥಿತಿ ಇಷ್ಟೊಂದು ಅನಾನುಕೂಲವಾಗಿರುವಾಗ ಒಂದು ಸಂಜೆ ಜಕ್ಕನಹಳ್ಳಿಯಲ್ಲಿ ಚಳುವಳಿಯ ಕಾರ್ಯಕರ್ತರು ಬಹಳ ಉತ್ಸಾಹದಿಂದ ಒಂದು ಹೆಂಡದಂಗಡಿಯನ್ನು ಮುಚ್ಚಿಸಲು ಪ್ರಯತ್ನಿಸಿದರು. ತಕ್ಷಣ ಸರ್ಕಲ್‌ನಲ್ಲಿದ್ದ ಮದ್ಯಪಾನ ವ್ಯಸನಿಗಳು ಒಟ್ಟಿಗೆ ಸೇರಿ ಚಳುವಳಿಗಾರರ ಮೇಲೆ ಜಗಳಕ್ಕೆ ಬಿದ್ದರು. ಮತ್ತು ಕೈ ಕೈ ಮಿಲಾಯಿಸುವ ಮಟ್ಟಕ್ಕೂ ಹೋದರು. ಚಳುವಳಿಗಾರರಲ್ಲಿ ಕೆಲವರು ಅಂಗಡಿಯನ್ನು ಜಖಂ ಮಾಡಿದರು. ಪರಿಸ್ಥಿತಿ ತುಂಬಾ ವಿಕೋಪಕ್ಕೆ ಹೋಯಿತು. ಅಷ್ಟರಲ್ಲಿ ಕೆಲವರು ನನ್ನ ಬಳಿಗೆ ಬಂದು ನಾನು ಅಲ್ಲಿರುವುದು ಬೇಡವೆಂದು, ಇದ್ದರೆ ಪ್ರಾಣಕ್ಕೆ ಅಪಾಯವೆಂದು ಹೇಳಿದರು ಮತ್ತು ಮೇಲುಕೋಟೆಗೆ ಹೋಗುವ ಬಸ್ಸಿನಲ್ಲಿ ಬಲವಂತವಾಗಿ ಕೂರಿಸಿದರು. ಈ ಘಟನೆ ನಂತರ ಮದ್ಯಪಾನ ನಿಷೇಧದ ನಮ್ಮ ಚಳುವಳಿ ನಿಂತಿತು. ಯಾವುದೇ ಒಂದು ಸಾಮಾಜಿಕ ಚಳುವಳಿ ಮಾಡಬೇಕಾದರೆ ಆತುರ ಸಲ್ಲದೆಂದು, ಜನಮಾನಸವನ್ನು ಪೂರ್ಣ ಸಿದ್ಧಗೊಳಿಸಬೇಕೆಂದು ಇದ್ದ ವಿಚಾರವನ್ನು ಕಾರ್ಯಕರ್ತರು ಸರಿಯಾಗಿ ನಿರ್ವಹಿಸದೆ ಹೋದರೆ ಎಂಥ ಪ್ರಮಾದವಾಗುತ್ತದೆ ಎಂಬುದಕ್ಕೆ ಇದೊಂದು ಉತ್ತಮ ಉದಾಹರಣೆ. ನಿಧಾನವಾಗಿ ಅತ್ಯಗತ್ಯವಾಗಿ ಕಟ್ಟಬೇಕಿದ್ದ ಸಾಮಾಜಿಕ ಚಳುವಳಿಯೊಂದು ದುಡುಕಿನಿಂದಾಗಿ ವಿಫಲಗೊಂಡಿತು. ಈಗಂತೂ ಮದ್ಯಪಾನ ನಿಷೇಧದ ಮಾತನ್ನು ಆಡಿದರೆ ಅದನ್ನು ಯಾರೂ ಲೆಕ್ಕಿಸುವುದೇ ಇಲ್ಲ. ಸರ್ಕಾರವೇ ಮದ್ಯಪಾನಕ್ಕೆ ಪ್ರೋತ್ಸಾಹ ಕೊಡುತ್ತಿರುವಾಗ ಇಂಥ ಚಳುವಳಿಗಳ ಗತಿ ಇದಕ್ಕಿಂತ ಬೇರೆಯಾಗಿರಲು ಹೇಗೆ ಸಾಧ್ಯ.

ಖಾದಿ ವಿಚಾರ

ಅಸರ್ಕಾರಿ ಖಾದಿ ಸಮ್ಮೇಳನ

ಸ್ವಾತಂತ್ರ್ಯ ಚಳುವಳಿಯ ಅಂಗವಾಗಿ ಗಾಂಧೀಜಿ ಖಾದಿ ಕೆಲಸವನ್ನು ಒಂದು ರಚನಾತ್ಮಕ ಕಾರ್ಯಕ್ರಮವನ್ನಾಗಿ ರೂಪಿಸಿದ್ದರು. ಆಗ ಖಾದಿ ಕೆಲಸ ದೇಶಾಭಿಮಾನದ ಕೆಲಸವಾಗಿತ್ತು! ಒಂದು ಮಿಷನ್ ಆಗಿತ್ತು. ಆದರೆ ಸ್ವಾತಂತ್ರ್ಯ ಬಂದ ಕೂಡಲೆ ಭಾರತ ಸರ್ಕಾರ ಪಾರ್ಲಿಮೆಂಟ್‌ನ ಶಾಸನಗಳ ಮೂಲಕ ಖಾದಿ ಮತ್ತು ಗ್ರಾಮೋದ್ಯೋಗ ಕಮೀಷನನ್ನು ಸ್ಥಾಪಿಸಿತು. ಈ ಕಮಿಷನ್‌ಗೆ ಧನಸಹಾಯ ಮಾಡಲಾರಂಭಿಸಿತು. ದೇಶದಲ್ಲಿರುವ ಖಾದಿ ಸಂಸ್ಥೆಗಳಿಗೆ ಪ್ರಮಾಣಪತ್ರ ಕೊಡುವುದು, ಸಾಲ ಮತ್ತು ಅನುದಾನ ಕೊಡುವುದು, ರಿಬೆಟ್ ಕೊಡುವುದು ಇತ್ಯಾದಿ ಕೆಲಸಗಳನ್ನು ಕಮಿಷನ್ ಮಾಡಲಾರಂಭಿಸಿತು. ಕಮೀಷನ್‌ಗೆ ಓರ್ವ ಛೇರ್ಮನ್, ಕಾರ್ಯಕಾರಿ ಮಂಡಳಿ ಹಾಗೂ ಬೇಕಾದಷ್ಟು ಸಿಬ್ಬಂದಿಯನ್ನು ಕೊಟ್ಟತು. ಖಾದಿ ಸಂಸ್ಥೆಗಳು ಕಾಲಕ್ರಮೇಣ ತಮ್ಮ ಸ್ವಂತ ಶಕ್ತಿಯನ್ನುಕಳೆದುಕೊಂಡು ಕಮೀಷನ್‌ನ ಕೈ-ಕಾಲುಗಳಂತೆ ಪರಿವರ್ತಿತವಾದವು. ದೊಡ್ಡ ಪ್ರಮಾಣದಲ್ಲಿ ಸಾಲದ ಹೊರೆಗೆ ಸಿಕ್ಕಿಹಾಕಿಕೊಂಡವು. ಎಲ್ಲಕ್ಕಿಂತ ಹೆಚ್ಚಾಗಿ ರಿಬೆಟ್ ಇಲ್ಲದೆ ಬಟ್ಟೆ ಮಾರಾಟವಾಗುವುದಿಲ್ಲ ಎಂಬ ಪರಿಸ್ಥಿತಿಗೆ ಬಂದು ಮುಟ್ಟಿದವು. ಇದು ಗಾಂಧೀಜಿಯವರು ಇಟ್ಟುಕೊಂಡಿದ್ದ ಖಾದಿ ಬಗೆಗಿನ ವಿಚಾರಕ್ಕೆ ತದ್ವಿರುದ್ಧವಾದುದು. ಇಂಥ ದುಃಸ್ಥಿತಿಯಿಂದ ಖಾದಿ ಉದ್ಯಮವನ್ನು ಪಾರು ಮಾಡಲು ಶ್ರೀ ಬಾಳವಿಜಯ್ ಮತ್ತು ಕೆಲವರು ಖಾದಿ ಮಿಷನ್ ಎಂಬ ಚಳುವಳಿಯನ್ನೇ ಪ್ರಾರಂಭಿಸಿದರು. ಈ ಚಳುವಳಿಯ ಮೂಲಕ ಸರ್ಕಾರ ಮತ್ತು ಅಸರ್ಕಾರೀ ಖಾದಿಯನ್ನು ಪ್ರಚಾರಕ್ಕೆ ತರಲು ಖಾದಿ ಮಿಷನ್‌ನವರು ಪ್ರಯತ್ನಿಸುತ್ತಿದ್ದಾರೆ. ಈ ಬಗ್ಗೆ ಖಚಿತವಾದ ಮತ್ತು ಸ್ಪಷ್ಟವಾದ ತೀರ್ಮಾನ ಕೈಗೊಳ್ಳಲು ದೇಶದ ಖಾದಿ ಸಂಸ್ಥೆಗಳ ಪ್ರತಿನಿಧಿಗಳು ೨೦೧೩ ಏಪ್ರಿಲ್ ೬ ಮತ್ತು ೭ರಂದು ಸೇವಾಗ್ರಾಮದಲ್ಲಿ ಸಮ್ಮೇಳನವೊಂದನ್ನು ಸರ್ವ ಸೇವಾ ಸಂಘದ ಖಾದಿ ಸಮಿತಿಯು ಏರ್ಪಡಿಸಿದೆ. ಆಸಕ್ತ ಖಾದಿ ಸಂಸ್ಥೆಗಳವರು ಸಮ್ಮೇಳನದಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

ಜಯವಂತ್ ಮಠಕರ್

- ೯೪೪೨೧೯೨೩೭೧೪೫ ಅಥವಾ ೯೪೪೨೧೯೨೩೭೧೪೫

* * *

ಸರ್ವೋದಯ ಆಂದೋಲನದ ಮುನ್ನಡೆ

'ಶ್ರಮಜೀವಿ ಆಶ್ರಮದ ಸ್ಥಾಪನೆ'

ಗಾಂಧೀಜಿಯವರು ಪ್ರತಿಪಾದಿಸಿದ ಸರ್ವೋದಯ ಸಮಾಜ ರಚನೆಯಲ್ಲಿ ಶ್ರಮಜೀವನ ಅಥವಾ ಅನ್ನ ಕಾಯಕಕ್ಕೆ ಬಹಳ ಮಹತ್ವವಿದೆ. ದುಡಿಮೆಯಿಲ್ಲದ ಜೀವನ ನಡೆಸುವುದು ಕಳ್ಳತನವನ್ನು ಮಾಡಿದಂತೆಯೇ ಸರಿ ಎಂಬ ಗೀತೆಯ ಮಾತನ್ನು ಗಾಂಧೀಜಿಯವರು ಆಗಾಗ ಹೇಳುತ್ತಿದ್ದರು. ಇಂದು ಶ್ರಮ ಜೀವನ ಆಧಾರಿತ ಜೀವನ ವಿಧಾನ ಇಲ್ಲದೆ ಇರುವುದರಿಂದ ಆರ್ಥಿಕವಾಗಿ, ಸಾಮಾಜಿಕವಾಗಿ ಪ್ರಗತಿ ಸಾಧಿಸಿದ್ದರೂ ಸಾಮಾಜಿಕ ಜೀವನದಲ್ಲಿ ನೆಮ್ಮದಿ ಇಲ್ಲವಾಗಿದೆ. ಶ್ರಮ ಜೀವನ ಮಾಡುವುದು ಕೀಳು ಎಂಬ ಮನೋಭಾವ ಬೆಳೆದಿದೆ. ಅಲ್ಲದೆ ಸಮಾಜದಲ್ಲಿ ದುಡಿಯುವ ವರ್ಗ ಬುದ್ಧಿಜೀವಿ ವರ್ಗ ಎಂಬ ವರ್ಗಗಳು ಉಂಟಾಗಿವೆ. ಬುದ್ಧಿ ಜೀವಿಗಳು ದುಡಿಮೆ ಮಾಡುವ ಜೀವಿಗಳ ಬೆನ್ನ ಮೇಲೆ ಸವಾರಿ ಮಾಡುತ್ತಿದ್ದಾರೆ. ಶೋಷಣೆ ಮುಕ್ತ ಸಮಾಜ ನಿರ್ಮಾಣವಾಗಬೇಕಾದರೆ ಪುನಃ ಶ್ರಮಜೀವನಕ್ಕೆ ಗೌರವಸಿಗಬೇಕು. ಅಂಥ ಒಂದು ಪ್ರಯತ್ನವನ್ನು ಪ್ರಸನ್ನರವರು ಹೆಗ್ಗೋಡಿನ ಸಮೀಪದ ಹೊನ್ನೇಸರದಲ್ಲಿ ಮಾಡುತ್ತಿದ್ದಾರೆ. ಬಟ್ಟೆ ಉತ್ಪಾದನೆಯ ಕಾಯಕದಲ್ಲಿ ಸುಮಾರು ೩೦೦ ಹೆಣ್ಣು ಮಕ್ಕಳು ತೊಡಗುವಂತೆ ಮಾಡಿದ್ದಾರೆ. ಸುತ್ತಲಿನ ಗ್ರಾಮಗಳಿಗೂ ಈ ಉದ್ಯಮವನ್ನು ಪಸರಿಸಿದ್ದಾರೆ. ಈ ಉದ್ಯಮದಲ್ಲಿ ತೊಡಗಿರುವ ಹೆಣ್ಣು ಮಕ್ಕಳಿಗೆ ಕೀಳರಿಮೆ ಬರದಂತೆಯೂ, ತಾವು ಬಡವರೆಂಬ ಭಾವನೆ ಅವರಲ್ಲಿ ಮೂಡದಂತೆ ಮಾಡಲು ಶ್ರಮಜೀವಿ ಆಶ್ರಮ ಸ್ಥಾಪಿಸಿದ್ದಾರೆ. ತನ್ಮೂಲಕ ಇಂದಿನ ಸಮಾಜವು ಸರ್ವೋದಯ ಸಮಾಜದಲ್ಲಿ ಪರಿವರ್ತನೆ ಆಗುವತ್ತ ಪ್ರಯತ್ನಿಸಿದ್ದಾರೆ. ಅವರ ಈ ಪ್ರಯತ್ನವನ್ನು ಸರ್ವೋದಯ ಆಂದೋಲನ ಶ್ಲಾಘಿಸುತ್ತದೆ. ಅವರ ಈ ಪ್ರಯತ್ನ ನೋಡಿದಾಗ ರವೀಂದ್ರನಾಥ ಠಾಕೂರರ ಶಾಂತಿನಿಕೇತನ ಮತ್ತು ವಿಶ್ವಭಾರತಿಯ ನೆನಪಾಗುತ್ತದೆ. ಶ್ರಮಜೀವಿ ಆಶ್ರಮದ ಆಶಯವೇನೆಂಬುದನ್ನು ಈ ಕೆಳಗಿನ ಅವರ ಮಾತುಗಳು ತಿಳಿಸುತ್ತವೆ:

"ಮುಂದಿನ ಮೂರು ದಿನಗಳ ಕಾಲ ನಾವು ಗಾಂಧೀಜಿಯವರ ವಿಚಾರಗಳ ಅಧ್ಯಯನ ನಡೆಸಲೆಂದು ಇಲ್ಲಿ ಸೇರಿದ್ದೇವೆ. ನಾವು ನೆರೆದಿರುವ ಈ ಜಾಗದಲ್ಲಿ ಶ್ರಮಜೀವಿಗಳ ಆಶ್ರಮವೊಂದನ್ನು ರೂಪಿಸುವ ಉದ್ದೇಶವಿದೆ ನಮಗೆ. ಸದ್ಯಕ್ಕೆ ಕೆಲಸ ಅರ್ಧವಾಗಿ, ಈ ಜಾಗವು ಅರ್ಧಕಟ್ಟಿದ ಹಾಗೂ ಅರ್ಧಕೆಡವಿದ ಸ್ಥಿತಿಯಲ್ಲಿದೆ. ಇದನ್ನು ಪೂರ್ಣಗೊಳಿಸುವುದು ಹಾಗೂ

ಆಶ್ರಮವು ಆಶ್ರಮವಾಗುವಂತೆ ಮಾಡುವ ಪ್ರಕ್ರಿಯೆಯೂ ಹೌದು ಈ ಅಧ್ಯಯನ ಶಿಬಿರ. ಇಲ್ಲಿ ನೆರದಿರುವ ನಾವುಗಳು, ಹೆಚ್ಚಾಗಿ ಗ್ರಾಮೀಣ ಜನರು, ಹೆಚ್ಚಾಗಿ ಹೆಣ್ಣುಮಕ್ಕಳು ಹಾಗೂ ಹೆಚ್ಚಾಗಿ ಬಡತನದ ಹಿನ್ನೆಲೆಯಿಂದ ಬಂದವರು. ಕಳೆದ ಎರಡು ದಶಕಗಳಿಂದ ನಾವು ಸಹಕಾರದಿಂದ ಬದುಕುವ ಪ್ರಯೋಗ ನಡೆಸಿದ್ದೇವೆ. ನಮ್ಮ ಈ ಪ್ರಯತ್ನಕ್ಕೆ ಚರಕ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘವೆಂದು ಹೆಸರಿಟ್ಟಿದ್ದೇವೆ. ನಮ್ಮ ಪ್ರಯತ್ನದಲ್ಲಿ ನಾವು ಸಾಕಷ್ಟು ಯಶಸ್ವಿಯಾಗಿದ್ದೇವೆ. ಚರಕವು ಬಡತನವನ್ನು ನಿವಾರಿಸಿಕೊಳ್ಳುವ ಒಂದು ಅಸ್ತ್ರ ಎಂದು ನಮಗೀಗ ಅರಿವಾಗಿದೆ. ಈಗ ನಾವು ಬಡವರಲ್ಲ.

ನಾವು ಬಡವರಲ್ಲವೆಂದರೇನರ್ಥ? ನಾವು ಸಾಹುಕಾರರೆಂದೇ? ಖಂಡಿತಾ ಅಲ್ಲ. ಹಾಗಿದ್ದರೆ ಚರಕವೆಂಬ ಅಸ್ತ್ರವು ಬಡತನ ನಿವಾರಣೆಯ ಬಗ್ಗೆ ಏನನ್ನು ಹೇಳುತ್ತದೆ? ಬಡತನವೆಂಬುದು, ಎಲ್ಲಕ್ಕಿಂತ ಮಿಗಿಲಾಗಿ ಒಂದು ಸ್ಥಿತಿ. ಹತಾಶೆಯ ಸ್ಥಿತಿ. ಬಸವಣ್ಣ ಹೇಳುವಂತೆ, ಸಂಕದಲ್ಲಿ ಬಿದ್ದು ಕೈಕಾಲು ಬಡಿಯುತ್ತ ಬೆನ್ನು ಮೇಲಾಗಿ ಬಿದ್ದಿರುವ ಹಸುವಿನ ಸ್ಥಿತಿ. ನಾವೆಷ್ಟೇ ಪ್ರಯತ್ನ ಪಟ್ಟರೂ, ನಮಗೆ ನಾವೇ ಸಹಾಯಮಾಡಿಕೊಳ್ಳಲಾರದ, ಇತರರಿಗೂ ಸಹಾಯ ಮಾಡಲಾರದ ಹತಾಶ ಪರಿಸ್ಥಿತಿ ಅದು. ಬಡತನವನ್ನು ಮೀರುವುದು ಎಂದರೆ ಈ ಹತಾಶ ಪರಿಸ್ಥಿತಿಯನ್ನು ಮೀರುವುದು ಎಂದೇ ಅರ್ಥ.

ಹಾಗಾಗಿ ಬಡತನವನ್ನು ಮೀರುವುದೆಂದರೆ ವಿಪರೀತ ಆಸ್ತಿ ಮಾಡುವುದು ಎಂದರ್ಥವಲ್ಲ; ಅಸಹ್ಯಕರವಾದ ಬೊಜ್ಜು ಬೆಳೆಸಿಕೊಳ್ಳುವುದು, ಸುಳ್ಳು ಮಾತನಾಡುವುದು, ಇತರರಿಂದ ದುಡಿಸಿಕೊಂಡು ಅವರ ಹೆಗಲ ಮೇಲೆ ಸವಾರಿ ಮಾಡುವುದು ಎಂದರ್ಥವಲ್ಲ. ಸಹಕಾರವೆಂಬ ತಂತ್ರದ ಮೂಲಕ ನಮಗೀಗ, ನಮ್ಮ ಬದುಕನ್ನು ನಾವೇ ನಡೆಸಬಲ್ಲೆವು, ನಾವು ಮಾತ್ರವಲ್ಲ ಇತರರಿಗೂ ಸಹಾಯ ಮಾಡಬಲ್ಲೆವು ಎಂಬ ಧೈರ್ಯ ಬಂದಿದೆ. ಎಲ್ಲಕ್ಕಿಂತ ಮಿಗಿಲಾಗಿ, ಒಳ್ಳೆಯತನ, ಒಳ್ಳೆಯ ನಡತೆ, ಎಂದರೇನು ಎಂದು ಯೋಚಿಸುವ ಸಮಯ ಬಂದಿದೆ ಈಗ. ಹಾಗೆಂದೇ ನಾವಿಲ್ಲಿ ನೆರದಿದ್ದೇವೆ. ನಮಗೆ ಗಾಂಧೀಜಿಯವರ ಬಗ್ಗೆ ಹೆಚ್ಚಿಗೆ ತಿಳಿದಿಲ್ಲ. ಆದರೆ ಇಷ್ಟು ಮಾತ್ರ ತಿಳಿದಿದೆ. ಅವರು ಏನೇ ಯೋಚಿಸಿದರೂ, ಏನೇ ಕೆಲಸ ಕೈಗೊಂಡರೂ, ಅದು ನಮ್ಮಂತಹ ಅಥವಾ ನಮಗಿಂತ ನಿಕೃಷ್ಟ ಪರಿಸ್ಥಿತಿಯಲ್ಲಿರುವಂತಹ ಗ್ರಾಮೀಣ ಬಡಜನರನ್ನು ಉದ್ದೇಶಿಸಿ ಇರುತ್ತಿತ್ತು ಎಂದು ನಮಗೆ ತಿಳಿದಿದೆ. ಭಾರತಕ್ಕೆ ಸ್ವತಂತ್ರ್ಯ ತರುವುದೆಂದರೆ ಗ್ರಾಮೀಣ ಬಡಜನರಿಗೆ ಸ್ವರಾಜ್ಯ ದಕ್ಕಿಸುವುದು ಎಂದವರು ಹೇಳುತ್ತಿದ್ದರು ಮತ್ತು ಆ ಬಗ್ಗೆಯೇ ಜೀವನವಿಡೀ ಕೆಲಸ ಕೈಗೊಂಡಿದ್ದರು. ಸ್ವರಾಜ್ಯವೆಂದರೆ ಹಳ್ಳಿಗರನ್ನು ಪೇಟೆಗೆ ತರುಬುವುದಲ್ಲ. ಹಳ್ಳಿಗರು ಹಳ್ಳಿಗಳಲ್ಲೇ ಉಳಿದು ಗೌರವ ಹಾಗೂ ಸಮಾನತೆಯ ಭಾವದಿಂದ

ಬದುಕುವದು ಎಂದವರು ಹೇಳುತ್ತಿದ್ದರು. ಹಳ್ಳಿಯ ಬದುಕಿನಲ್ಲಿ ಸಹಜವಾಗಿ ಮೈಗೂಡಿರುವ ಸರಳ ಬದುಕು, ಸಹನೆ, ತಾಳ್ಮೆ ಹಾಗೂ ದೈಹಿಕ ಶ್ರಮದ ದುಡಿಮೆಗಳಿಗೆ ಅವರು ಮಹತ್ವ ನೀಡಿದ್ದರು. ದಿನೇದಿನೇ ಕೊಳೆರೋಗದಂತೆ ಹರಡುತ್ತಿರುವ ಹಾಗೂ ಹಳ್ಳಿಗಳನ್ನು ಹಾಳುಗೆಡವುತ್ತಿರುವ ಜಾತಿಪದ್ಧತಿ ಹಾಗೂ ಅಸ್ಪೃಷ್ಯತೆಯ ಆಚರಣೆಗಳು ತೊಲಗಬೇಕೆಂದು ಅವರು ಬಯಸಿದ್ದರು. ಸ್ವಯಂಚಾಲಿತ ಯಂತ್ರಗಳನ್ನು ಅವರು ವಿರೋಧಿಸಿದ್ದರು.

ನಾವೂ ಸಹಿತ ಸರಳ ಬದುಕಿಗೆ ಮಹತ್ವ ನೀಡಲು ಬಯಸುತ್ತೇವೆ. ಶ್ರಮದ ಬದುಕಿನಲ್ಲಿಯೇ ಉಳಿದು ತಿಳುವಳಿಕೆ ಪಡೆಯಲು ಬಯಸುತ್ತೇವೆ. ಹಾಡುತ್ತ ಹಸೆ ಬರೆಯುತ್ತ ಬದುಕಲು ಬಯಸುತ್ತೇವೆ. ನಮ್ಮ ಮಕ್ಕಳು ಸಂತೋಷದಿಂದ ಬಾಳುವೆ ಮಾಡಬೇಕೆಂದು ನಾವು ಬಯಸುತ್ತೇವೆ. ಮಾತ್ರವಲ್ಲ, ನಮ್ಮಂತೆಯೇ ಇತರ ಮನುಷ್ಯರು, ಇತರೆ ಪ್ರಾಣಿಪಕ್ಷಿಗಳು, ಗಿಡಮರಗಳು ಸಂತೋಷದಿಂದ ಬದುಕಲಿ ಎಂದು ಬಯಸುತ್ತೇವೆ.

ಗಾಂಧೀ ಶಾಲೆಗೆ ಪೇಟೆಯಿಂದ ನೀವು ಹಲವಾರು ಮಂದಿ ಹಿರಿಯರು ಹಾಗೂ ತಿಳಿದವರು ಬಂದಿದ್ದೀರಿ. ಗಾಂಧೀಜಿಯವರ ವಿಚಾರಗಳನ್ನು ನಮ್ಮೊಟ್ಟಿಗೆ ಹಂಚಿಕೊಳ್ಳಿ ಎಂದು ನಿಮ್ಮಲ್ಲಿ ನಾವು ಪ್ರಾರ್ಥಿಸುತ್ತೇವೆ.

ಸಂತಾಪ...

ಅಖಿಲ ಭಾರತ ಸರ್ವಸೇವಾಸಂಘದ ಅಧ್ಯಕ್ಷರೂ, ಸರ್ವೋದಯ ವಿಚಾರವೇತ್ತರೂ ಅಗಿದ್ದ ಶ್ರೀ ಠಾಕೂರದಾಸ್ ಬಂಗ್‌ರವರು, ೨೮-೧-೨೦೧೩, ಸೋಮವಾರ ನಿಧನರಾದರು. ಬಂಗ್‌ರವರ ನಿಧನದಿಂದಾಗಿ ಸರ್ವೋದಯ ಆಂದೋಲನವು ಮಹಾಚೇತನವನ್ನು ಕಳೆದುಕೊಂಡಂತಾಗಿದೆ. 'ಜನಪದ ವಿಚಾರ' ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತದೆ.

* * *

ಕರ್ನಾಟಕ ಸರ್ವೋದಯ ಮಂಡಲಿಯ ಬೆಂಗಳೂರು ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಎಸ್.ಅಶೋಕ್-೨೮-೧-೨೦೧೩, ಸೋಮವಾರ ತಮ್ಮ ಮಧ್ಯ ವಯಸ್ಸಿನಲ್ಲಿ ನಿಧನರಾದರು. ಅವರು ನಿಷ್ಠಾವಂತ ಮತ್ತು ಪ್ರಾಮಾಣಿಕ ಕಾರ್ಯಕರ್ತರಾಗಿದ್ದರು. ಅವರ ನಿಧನದಿಂದ ಸರ್ವೋದಯ ಮಂಡಲಿಗೆ ಅಪಾರ ನಷ್ಟವುಂಟಾಗಿದೆ. ಜನಪದ ವಿಚಾರವು ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತದೆ.

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ
ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ ಕೆ.ಮೋಹನ್‌ದೇವ್ ಆಳ್ವಾ ; ಕರ್ನಾಟಕ ಸರ್ವೋದಯ ಸಂಘ ;
ಶ್ರೀ ಎಸ್.ವಿಶ್ವನಾಥ್ ; ಶ್ರೀ ಸಿ.ವಿ.ತಿರುಮಲರಾವ್ ; ಶ್ರೀಮತಿ ಪ್ರಭಾ ವೆಂಕಟೇಶ್
ಶ್ರೀ ಜಿ.ಎಲ್.ಕುಮಾರ್ ; ಶ್ರೀ ಹೆಚ್.ಮಂಜುನಾಥ ಭಟ್ – ಬೆಂಗಳೂರು
ಶ್ರೀ ಎಂ.ಎನ್.ಶಿವಶಂಕರ್ ; ಶ್ರೀ ಕೆ.ಎಸ್.ಶ್ರೀನಿವಾಸಮೂರ್ತಿ; ಶ್ರೀ ಬಿ.ಕೇಶವರಾಜು
ಶ್ರೀ ಬಿ.ಎಸ್.ಎನ್.ಪ್ರಸಾದ್ – ಮೈಸೂರು
ಶ್ರೀ ಸರ್ಕಾರಿ ಪ್ರಥಮ ದರ್ಜೆ ಕಾಲೇಜು – ಸಾಲಿಗ್ರಾಮ
ಶ್ರೀ ಜಿ.ವಿ.ವಿ.ಶಾಸ್ತ್ರಿ – ತುಮಕೂರು : ಶ್ರೀ ಡಿ.ಎಸ್.ನಾಗಭೂಷಣ್ – ಶಿವಮೊಗ್ಗ
ಶ್ರೀ ಎಚ್.ಎಸ್.ಎಸ್.ರಾವ್ – ಮಣಿಪಾಲ್ : ಶ್ರೀ ಸದಾನಂದ – ಚಾಮರಾಜನಗರ

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ
ಹೊಸದಾಗಿ ಪತ್ರಿಕೆಗೆ ಚಂದಾದಾರರಾದ

ಶ್ರೀ ಸಿ.ಅಶ್ವತ್ಥನಾರಾಯಣಪ್ಪ ; ಶ್ರೀ ಯು.ವಿ.ವಸಂತರಾವ್
ಶ್ರೀಮತಿ ಸುರೇಖಾ – ಬೆಂಗಳೂರು : ಪ್ರೊ.ಎಂ.ಕೆ.ಮೃತ್ಯುಂಜಯ – ಮಿರ್ಲೆ
ಶ್ರೀ ಹೆಚ್.ಮಂಜುನಾಥ್ – ಬಲ್ಲೇನಹಳ್ಳಿ ; ಶ್ರೀ ಕೆ.ಈಶ್ವರಯ್ಯ – ತುಮಕೂರು
ಶ್ರೀ ಎ.ವೀರಣ್ಣ – ಸಂಡೂರು : ಶ್ರೀ ಕಡಿದಾಳು ಶಾಮಣ್ಣ – ಭಗವತೀಕೆರೆ
ಜಿ. ಶ್ರೀಮತಿ – ಗುಮ್ಮನಹಳ್ಳಿ ಗೇಟ್, ಶಿರಾ
ಶ್ರೀ ವಿ.ಜಗನ್ನಾಥ್ ; ಶ್ರೀ ಸತೀಶ್‌ಭಟ್ – ಮೈಸೂರು

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ-ಅಂಚೆ

KA / SK / MND / 470 / 2012-2014
Regd. no. KAR / KAN / 2000 / 3820

9740080619

ಶ್ರೀಮತಿ/ ಶ್ರೀ..

....

....

JANAPADA VICHARA
Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya - 571431. Phone : 08236 316344 / 299854
e-mail : janapada@yahoo.com - web : janapada.net
Printed at Sanketh, Mudrana, Melkote.